ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com



ಸೆಪ್ಟೆಂಬರ್ 2022 ಸಂಪುಟ 18
ಸಂಚಿಕೆ 09
ಸಂಚಿಕೆ ಬೆಲೆ ರೂ. 1/–


# ಸ್ನೇಹ ಚಿಂತನ

ಮಾಸ ಪತ್ರಿಕೆ




ಸ್ವಾತಂತ್ರ್ಯ ದಿನಾಚರಣೆ – ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – I & II



ಗಣೇಶ ಚತುರ್ಥಿ ಆಚರಣೆ




ಚಂದ್ರಹಾಸ ಚರಿತೆ ಯಕ್ಷಗಾನ





324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# ಹೃತ್ಪೂರ್ವಕ ಅಭಿನಂದನೆಗಳು



## ಶ್ರೀಮತಿ ಸುಜಯ ಜೆ. ಶೆಟ್ಟಿ ಮತ್ತು ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಯೋಜನೆಗೆ 25 ಲಕ್ಷ ರೂ.ಗಳ ಉದಾರ ದೇಣಿಗೆ ನೀಡಿದ ಉದ್ಯಮಿ, ನಮ್ಮ ಸಂಘದ ಹಿರಿಯ ಸದಸ್ಯರಾದ **ಶ್ರೀಮತಿ ಸುಜಯ ಜೆ. ಶೆಟ್ಟಿ ಮತ್ತು ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ** ದಂಪತಿಗಳಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು**
**ಹಾಗೂ ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರುಗಳು**

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL 18** | **SEPTEMBER 2022** | **ISSUE 09**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಲಹಾ ಮಂಡಳಿ :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ – ಗಣೇಶ ಚತುರ್ಥಿ ಆಚರಣೆ | 5 |
| ಮಹಿಳಾ ವಿಭಾಗ – 'ದಸರಾ ಆಚರಣೆ' | 8 |
| Independence Day Celebrations | 9 |
| Independence Day Celebration at R.N.S Vidyaniketan – II | 10 |
| ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ 25ನೇ ವಾರ್ಷಿಕ ಸರ್ವ ಸದಸ್ಯರ ಸಭೆ | 11 |
| Lesser Known Facts of Rituals | 12 |
| ಯಕ್ಷ ಬಂಡಿಗೆ ಬಂಟರ ಕೊಂಡಿ | 13 |
| ನವಭಾವ, ನವ ಶಕ್ತಿ ತುಂಬಿದ ಶತಮಾನದ ಕವಿ ಕಯ್ಯಾರ | 17 |

**ಮುಖ ಪುಟ**

ಸ್ವಾತಂತ್ರ್ಯ ದಿನಾಚರಣೆ – ಬಂಟರ ಸಂಘ
ಆರ್. ಎನ್. ಎಸ್. ವಿದ್ಯಾನಿಕೇತನ – I & II
ಗಣೇಶ ಚತುರ್ಥಿ ಆಚರಣೆ, ಯಕ್ಷಗಾನ

# ಸಂಪಾದಕೀಯ



"ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ॥
ಇಲ್ಲೇ ಇರುವ ಪ್ರೀತಿ, ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ॥

ಜಿ.ಎಸ್. ಶಿವರುದ್ರಪ್ಪರವರ ಈ ಮೇಲಿನ ಸಾಲುಗಳಂತೆ, ನಾವು ಎಲ್ಲೋ ಒಂದು ಕಡೆ ಜೀವನದ ನಿಜವಾದ ಉದ್ದೇಶ, ಸುಖದ ಮೂಲವನ್ನು ಕಂಡುಕೊಳ್ಳುವುದರಲ್ಲಿ ವಿಫಲರಾಗುತ್ತಿದ್ದೇವೆ. ಕಾಣದ ದೇವರ ದರ್ಶನಕ್ಕಾಗಿ ನಾವು ಹರಸಾಹಸ ಪಡುತ್ತೇವೆ. ದೇವರ ಸಾಕ್ಷಾತ್ಕಾರಕ್ಕಾಗಿ ಗುಡಿ, ಗೋಪುರ, ಚರ್ಚ್, ಮಸೀದಿಗಳನ್ನು ನಿರ್ಮಿಸುತ್ತಿದ್ದೇವೆ. ಆದರೆ ಇಲ್ಲಿಯವರೆಗೂ ತನ್ನ ಸುತ್ತ ಪ್ರೀತಿ, ವಿಶ್ವಾಸ, ಸಾಮರಸ್ಯದ ಬದುಕನ್ನು ಪ್ರತಿಷ್ಠಾಪಿಸುವಲ್ಲಿ ಸೋಲುತ್ತಿದ್ದೇವೆ. ಇದಕ್ಕೆ ಕಾರಣ ಸ್ವತಃ ನಾವೇ. ನಮ್ಮ ಯೋಚನಾ ದೌರ್ಬಲ್ಯವೆಂದು ಹೇಳಬಹುದು. ನಮ್ಮ ಅಹಂ, ಸ್ವಪ್ರತಿಷ್ಠೆಗಳಿಂದ ನಮ್ಮವರೊಡನೆ ಹೊಂದಿಕೊಂಡು ಬದುಕಲು ಆಗದೆ ಕಷ್ಟ ಪಡುತ್ತೇವೆ. ದುಃಖ ಅನುಭವಿಸುತ್ತೇವೆ.

ಈ ಸಂದರ್ಭದಲ್ಲಿ ಅಮಿತಾಭ್ ಬಚ್ಚನ್‌ರವರು ಹಿಂದೊಮ್ಮೆ ಹಂಚಿಕೊಂಡ ಸ್ವಪ್ರತಿಷ್ಠೆ ವಿಚಾರವಾಗಿ ಕಲಿತ ಈ ಪಾಠ ಎಲ್ಲರಿಗೂ ದಾರಿದೀಪವಾಗಲೇಬೇಕು.

ಒಮ್ಮೆ ಅಮಿತಾಭ್ ಬಚ್ಚನ್‌ರವರು ಯಶಸ್ಸಿನ ಉತ್ತುಂಗದಲ್ಲಿರುವಾಗ ವಿಮಾನ ಪ್ರಯಾಣದ ಸಂದರ್ಭ ನಡೆದ ಘಟನೆ. ಅವರ ಪಕ್ಕದಲ್ಲಿ ಮೇಲ್ನೋಟಕ್ಕೆ ಮಧ್ಯಮ ವರ್ಗದ ಸರಳ, ಶಿಸ್ತಿನ, ವಿದ್ಯಾವಂತರಂತೆ ಕಾಣುವ ವ್ಯಕ್ತಿಯೊಬ್ಬರು ಕುಳಿತಿದ್ದರು. ಇತರ ಪ್ರಯಾಣಿಕರು ಅಮಿತಾಭ್‌ರನ್ನು ಗುರುತಿಸಿ ಮಾತನಾಡಿಸುತ್ತಿದ್ದರೆ ಈ ವ್ಯಕ್ತಿ ಮಾತ್ರ ತನ್ನ ಪಾಡಿಗೆ ತಾನು ಪತ್ರಿಕೆ ಓದುತ್ತಾ ಕುಳಿತಿರುವುದನ್ನು ನೋಡಿ ಕುತೂಹಲದಿಂದ ಮಾತಿಗೆ ಎಳೆಯುತ್ತಾರೆ. ಆ ವ್ಯಕ್ತಿ ಅಷ್ಟೇ ವಿನಯದಿಂದ ಪ್ರತಿಕ್ರಿಯೆ ನೀಡುತ್ತಾರೆ. ಇವರು ಸಿನಿಮಾ ನೋಡುತ್ತೀರಾ? ಎಂದು ಕೇಳಿದಾಗ, ಆ ವ್ಯಕ್ತಿ ತುಂಬಾ ಕಡಿಮೆ ಬಹಳ ಹಿಂದೆ ಒಂದು ನೋಡಿದ್ದೆ ಎಂದಾಗ ಅಮಿತಾಭ್ ನಾನು ಹಿಂದಿ ಸಿನಿಮಾ ರಂಗದ ನಟನೆಂದು ತನ್ನನ್ನು ಪರಿಚಯಿಸುತ್ತಾರೆ. ಆದರೆ ಆ ವ್ಯಕ್ತಿ ತನ್ನ ಬಗ್ಗೆ ಹೇಳಿಕೊಳ್ಳುವ ಆಸಕ್ತಿ ತೋರುವುದಿಲ್ಲ. ಪ್ರಯಾಣ ಮುಗಿಸಿ ಕೆಳಗಿಳಿದು ಹಸ್ತಲಾಘವ ನೀಡಿ ನಿಮ್ಮೊಂದಿಗೆ ಮಾತನಾಡಿ ಸಂತೋಷವಾಯಿತು. ನನ್ನ ಹೆಸರು ಅಮಿತಾಭ್ ಬಚ್ಚನ್ ಎಂದು ಔಪಚಾರಿಕವಾಗಿ ಹೇಳಿದರು. ಆಗ ಆ ವ್ಯಕ್ತಿ ಮುಗುಳ್ನಗುತ್ತಾ "ಧನ್ಯವಾದಗಳು" ನಾನು ಜೆ.ಆರ್.ಡಿ. ಟಾಟಾ ಎಂದಾಗ ಅಮಿತಾಭ್ ಮೂಕವಿಸ್ಮಿತರಾದರು. ಈ ವ್ಯಕ್ತಿತ್ವ ಎಲ್ಲರ ಜೀವನ ಪಾಠವಾಗಬೇಕು.

ಈ ಭ್ರಮಾ ಲೋಕದಿಂದ ಹೊರಬಂದು, ನಮ್ಮೊಂದಿಗಿರುವ ಸ್ನೇಹಿತರ, ಬಂಧುಗಳ ಕಷ್ಟ ಸುಖಗಳಲ್ಲಿ ಒಂದಾಗೋಣ. ಎತ್ತರ ತಲುಪಿದ ಮೇಲೆ ಏರಲು ಉಪಯೋಗಿಸಿದ ಏಣಿಯನ್ನು ಒದೆಯಬೇಡ, ಕೆಳಗಿಳಿಯಲು ಬೇಕಾಗುತ್ತದೆ ಎಂದು ಜ್ಞಾನಿಗಳು ಹೇಳಿದ ಮಾತು ಎಷ್ಟೊಂದು ಅರ್ಥಪೂರ್ಣವಾಗಿದೆ. ಏರಿದಾತ ಕೆಳಗಿಳಿಯಲೇಬೇಕು ಇದೇ ಬದುಕಿನ ನಿಯಮ! ಹಾಗೆಯೇ ಬದುಕಿನ ಅನೇಕ ಹಂತಗಳಲ್ಲಿ, ತಿರುವುಗಳಲ್ಲಿ ನಿಂತು ಮಾರ್ಗದರ್ಶನ ನೀಡಿ, ಗುರಿ ಸೇರಲು ಸಹಕರಿಸಿದವರನ್ನು ಯಾವತ್ತೂ ಮರೆಯಬಾರದು.

ಈ ಬದುಕು ಆನೆಯಾದರೆ ನಮ್ಮ ಬದುಕು ಇರುವೆಯಂತಹುದು. ಆನೆಯ ಕಾಲಡಿಯಲ್ಲಿ ಬಿದ್ದಿರುವ ಇರುವೆಗೆ ಆನೆಯ ಒಂದು ಭಾಗ ಮಾತ್ರ ನೋಡಲು ಸಾಧ್ಯವೇ ಹೊರತು ಸಂಪೂರ್ಣ ಆನೆಯನ್ನು ನೋಡಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಜ್ಞಾನ ಎಷ್ಟೇ ತೀಕ್ಷ್ಣವಾಗಿದ್ದರೂ ಸಹ ಎಲ್ಲಾ ಪ್ರಪಂಚ ಜ್ಞಾನವನ್ನು ಅರಿತಿರಲಾರೆವು. ಈ ಬದುಕನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಅಸಾಧ್ಯ. ಜೀವನದ ಹಾದಿ ಸೊಗಸಾಗಿದೆ, ಇದನ್ನು ಜಟಿಲಗೊಳಿಸದೆ ನಾವು ನಾವಾಗಿರೋಣ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



ಸದಸ್ಯ ಬಾಂಧವರೆಲ್ಲರಿಗೂ ಗಣೇಶ ಹಬ್ಬದ ಶುಭಾಶಯಗಳು. ಬಹಳ ಅದ್ಧೂರಿಯಾಗಿ ೩ ದಿನಗಳ ಕಾರ್ಯಕ್ರಮಗಳೊಂದಿಗೆ ಮುಗಿದ ಗಣೇಶ ಹಬ್ಬದ ಸಡಗರ ಎಲ್ಲರಲ್ಲೂ ಮನೆ ಮಾಡಿತ್ತು. ಮೂರು ದಿನಗಳ ಕಾರ್ಯಕ್ರಮಗಳನ್ನು ಬಹಳ ಅಚ್ಚುಕಟ್ಟಾಗಿ ನಡೆಸಲು ನಮ್ಮ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀ ಕೀರ್ತನ್ ಶೆಟ್ಟಿಯವರು, ಸಂಚಾಲಕರಾದ ಶ್ರೀ ಜಯಕರ ಶೆಟ್ಟಿಯವರು ಮತ್ತು ಸಮಿತಿ ಸದಸ್ಯರೆಲ್ಲರೂ ಸಜ್ಜಾಗಿ ನಿಂತಿದ್ದರು. ಇವರೊಂದಿಗೆ ಸಂಘದ ಇತರ ಅನೇಕ ಸದಸ್ಯರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರೆಲ್ಲರೂ ಸಂಭ್ರಮದಲ್ಲಿ ಪಾಲುದಾರರಾಗಿ ಎಲ್ಲರೂ ಜೊತೆಯಾಗಿ ಕೆಲಸ ಮಾಡಿದ್ದು ನಮ್ಮ ಸಂಘದ ವಿಶೇಷತೆಯನ್ನು ಎತ್ತಿ ತೋರಿಸುತ್ತದೆ. ವಿನಾಯಕನಿಗೆ ವಿಶೇಷ ಪೂಜೆ, ಹೋಮ ಇತ್ಯಾದಿಗಳೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಭಜನೆ, ಯಕ್ಷಗಾನ ಪ್ರದರ್ಶನ, ಹುಲಿ ಕುಣಿತ, ಕೀಲು ಕುದುರೆ, ಅದ್ಧೂರಿ ಮೆರವಣಿಗೆ ಇತ್ಯಾದಿಗಳೊಂದಿಗೆ ಸದಸ್ಯರೆಲ್ಲರೂ ಸಂಭ್ರಮಿಸಿದರು. ಶ್ರೀ ವರಸಿದ್ಧಿ ವಿನಾಯಕನ ಆಶೀರ್ವಾದ ಸದಾ ಎಲ್ಲಾ ಸದಸ್ಯರ ಮೇಲಿರಲಿ ಎಂಬುದು ನನ್ನ ಹಾರೈಕೆ.

ಉಭಯ ಶಾಲೆಗಳಲ್ಲಿ ಚಟುವಟಿಕೆಗಳು ಗರಿಗೆದರಿವೆ. ನಮ್ಮ ಪದಾಧಿಕಾರಿಗಳು ಅನೇಕ ಬಾರಿ ಶಾಲೆಗಳಿಗೆ ಭೇಟಿ ನೀಡಿ, ಇರುವ ಕುಂದುಕೊರತೆಗಳು, ಇನ್ನೂ ತುರ್ತಾಗಿ ಆಗಬೇಕಿರುವ ಕೆಲಸಗಳು ಹಾಗೂ ಇತರ ಅಗತ್ಯತೆಗಳ ಬಗ್ಗೆ ಅನೇಕ ಸಭೆಗಳನ್ನು ನಡೆಸಿ, ಅಗತ್ಯವಿರುವ ಕೆಲಸಗಳ ಬಗ್ಗೆ ತಕ್ಕ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದಕ್ಕೆ ಎಲ್ಲರ ಸಕಾರಾತ್ಮಕವಾದ ಬೆಂಬಲವೂ ದೊರೆತಿದೆ. ಶಾಲೆಯ ಸಿಬ್ಬಂದಿಗಳಿಗೆ ಬೇಕಾದ ಕೆಲಸಗಳ ಬಗ್ಗೆ ವಿವರಿಸಿ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಬಹಳ ಜವಾಬ್ದಾರಿಯಿಂದ ನಿರ್ವಹಿಸುವಂತೆ ಸಲಹೆ ನೀಡಲಾಗಿದೆ. ಹಾಗೆಯೇ ಶಾಲಾ ಮಕ್ಕಳ ಪೋಷಕರ ಸಲಹೆ-ಸೂಚನೆಗಳನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ಬೇಕಾದ ಕೆಲಸಗಳನ್ನು ತುರ್ತಾಗಿ ಮಾಡಲು ಸೂಚಿಸಲಾಗಿದೆ. ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಆದ್ಯತೆ ನೀಡಲಾಗಿದೆ.

ಸಂಘದ ಮುಂದಿನ ಯೋಜನೆಗಳ ಬಗ್ಗೆ ಕೆಲವು ಸಭೆಗಳನ್ನು ನಡೆಸಲಾಗಿದೆ. ಇದಕ್ಕೆ ಬೇಕಾದ ತಯಾರಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಸಂಘದ ಯಾವುದೇ ಯೋಜನೆಗಳನ್ನು ಮಾಡುವಾಗ ಎಲ್ಲಾ ತರಹದ ಯೋಚನೆಗಳನ್ನು ಮಾಡಬೇಕಾಗುತ್ತದೆ. ಮುಂದೆ ಎದುರಾಗಬಹುದಾದ ಸಮಸ್ಯೆಗಳು, ಆರ್ಥಿಕ ಕ್ರೋಢೀಕರಣ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು, ಕೆಲವು ಸಲಹೆಗಾರರು, ವಕೀಲರುಗಳಿಂದ ಸಲಹೆಗಳನ್ನು ತೆಗೆದುಕೊಂಡು ಮುಂದಿನ ಹೆಜ್ಜೆಗಳನ್ನು ಇಡಲಾಗುತ್ತದೆ. ಸಂಘಕ್ಕೆ ಹೊರೆಯಾಗದಂತೆ, ದಿನ ನಿತ್ಯದ ಕೆಲಸಗಳು, ಶಾಲೆಗಳಿಗೆ ತೊಂದರೆಯಾಗದಂತೆ ಮುಂದಿನ ಯೋಜನೆಗಳನ್ನು ಪ್ರಾರಂಭ ಮಾಡುವ ಆಶಯ ನಮ್ಮದಾಗಿದೆ. ಈ ವಿಚಾರವಾಗಿ ಸದಸ್ಯರೆಲ್ಲರ ಸಹಕಾರವನ್ನು ಮುಂದಿನ ದಿನಗಳಲ್ಲಿ ನಾವು ನಿರೀಕ್ಷಿಸುತ್ತಿದ್ದೇವೆ.

ರಾಜ್ಯದ ಇತರ ಕೆಲವು ಸಂಘಗಳಿಂದ ಬರುವ ಹಲವಾರು ಬೇಡಿಕೆಗಳ ಬಗ್ಗೆಯೂ ಚರ್ಚಿಸಲಾಗುತ್ತಿದೆ, ಅಲ್ಲದೇ ಅವರ ಬೇಡಿಕೆಗಳಿಗೆ ಪೂರಕವಾಗಿ ಆದಷ್ಟು ಬೇಗ ನಿರ್ಧಾರಗಳನ್ನು ತೆಗೆದುಕೊಂಡು ಅದಕ್ಕೆ ಬೇಕಾದ ಆರ್ಥಿಕ ಏರ್ಪಾಡುಗಳನ್ನು ಮಾಡುವ ಕೆಲಸಗಳು ನಡೆಯುತ್ತಿವೆ. ಹಾಗೆಯೇ ಸಂಘದ ಉಪಸಮಿತಿಗಳು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿ ಮುಂದಿನ ದಿನಗಳಲ್ಲಿ ಬರುವ ನವರಾತ್ರಿ, ದೀಪಾವಳಿ ಇತ್ಯಾದಿ ಹಬ್ಬಗಳ ಆಚರಣೆಯ ಬಗ್ಗೆ, ಹಾಗೂ ಇತರ ಸಮಿತಿಗಳ ಮುಂದಿನ ಹೆಜ್ಜೆಗಳ ಬಗ್ಗೆ ಚರ್ಚೆಗಳು ನಡೆಯುತ್ತಿವೆ.

ಒಟ್ಟಾರೆ ಸಂಘದ ಅಭಿವೃದ್ಧಿ, ಶಾಲೆಯ ಗುಣಮಟ್ಟ, ಮುಂದಿನ ಯೋಜನೆಗಳು, ಉಪಸಮಿತಿಗಳ ರಚನೆ ಹಾಗೂ ಕೆಲಸಗಳ ಬಗ್ಗೆ ಉತ್ತಮ ನಿರ್ಧಾರಗಳನ್ನು ತೆಗೆದುಕೊಂಡು ಸಂಘವನ್ನು ತೃಪ್ತಿಕರವಾದ ರೀತಿಯಲ್ಲಿ ಮುನ್ನಡೆಸಿಕೊಂಡು ಹೋಗುವ ಆಸೆಯೊಂದಿಗೆ ತಮ್ಮೆಲ್ಲರ ಸಹಕಾರ ಈ ನಿಟ್ಟಿನಲ್ಲಿ ಕೋರುತ್ತಿದ್ದೇವೆ. ಶ್ರೀ ವರಸಿದ್ಧಿ ವಿನಾಯಕನು ನಿಮ್ಮ ಹಾಗೂ ನಿಮ್ಮ ಕುಟುಂಬದವರೆಲ್ಲರಿಗೂ ಮಂಗಳವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



**ಮಾನ್ಯ ಸದಸ್ಯ ಬಾಂಧವರೇ,**

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ – I ಮತ್ತು II ರ ಸಂಕೀರ್ಣದಲ್ಲಿ 75ನೇ ಸ್ವಾತಂತ್ರ್ಯೋತ್ಸವವನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು. ವಿಜಯನಗರ ಸಂಕೀರ್ಣದಲ್ಲಿ ಧ್ವಜಾರೋಹಣವನ್ನು ಅಸಿಸ್ಟೆಂಟ್ ಇನ್‌ಕಮ್ ಟ್ಯಾಕ್ಸ್ ಕಮೀಷನರ್ ಕುಮಾರಿ ನಿವ್ಯಾ ಪಿ. ಶೆಟ್ಟಿ, IRS ಇವರು ನೆರವೇರಿಸಿದರು. ಯಲಚಗುಪ್ಪೆ ಸಂಕೀರ್ಣದಲ್ಲಿ ಸಂಘದ ಉಪಾಧ್ಯಕ್ಷರುಗಳ ಉಪಸ್ಥಿತಿಯಲ್ಲಿ ಧ್ವಜಾರೋಹಣವನ್ನು ನೆರವೇರಿಸಲಾಯಿತು. ಧ್ವಜಾರೋಹಣದ ನಂತರ ದೇಶಭಕ್ತಿಯನ್ನು ಸಾರುವ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ನಡೆಸಿಕೊಟ್ಟರು.

ಗಣೇಶ ಚತುರ್ಥಿ ಆಚರಣೆಯನ್ನು ತಮ್ಮೆಲ್ಲರ ಸಹಕಾರದಿಂದ 3 ದಿನಗಳ ಕಾಲ ಶ್ರದ್ಧಾ–ಭಕ್ತಿಯಿಂದ ನೆರವೇರಿಸಲಾಯಿತು. ಬಹಳಷ್ಟು ಸಂಖ್ಯೆಯಲ್ಲಿ ಭಕ್ತರು ಪೂಜಾ ಕೈಂಕರ್ಯದಲ್ಲಿ ಭಾಗವಹಿಸಿ ವರಸಿದ್ಧಿ ವಿನಾಯಕನ ಕೃಪೆಗೆ ಪಾತ್ರರಾದರು. ಗಣೇಶ ಚತುರ್ಥಿ ದಿನದಂದು ಸುಮಾರು 1500ಕ್ಕೂ ಮಿಕ್ಕಿದ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಸೇವೆಯನ್ನು ನೀಡಿದ ಶ್ರೀಮತಿ ಸುಜಾತ ಎಸ್. ಶೆಟ್ಟಿ ಮತ್ತು ಶ್ರೀ ತಂತ್ರಾಡಿ ಸುಬ್ರಹ್ಮಣ್ಯ ಶೆಟ್ಟಿ ದಂಪತಿಗಳಿಗೆ ಹಾಗೂ ದೇಣಿಗೆ/ ಪ್ರಾಯೋಜಕತ್ವದ ಮೂಲಕ ಸಹಕರಿಸಿದ ಸರ್ವರಿಗೂ ಅಭಿನಂದನೆಗಳು.

ಪೂಜಾ ಕಾರ್ಯಕ್ರಮಕ್ಕೆ ಅಗತ್ಯವಿರುವ ನಿಧಿ ಸಂಗ್ರಹಿಸಿ ಬಹಳ ವಿಜೃಂಭಣೆಯಿಂದ ಕಾರ್ಯಕ್ರಮ ಆಯೋಜಿಸುವಲ್ಲಿ ಸಫಲರಾದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ಕೀರ್ತನ್ ಶೆಟ್ಟಿ, ಸಂಚಾಲಕ ಶ್ರೀ ಜಯಕರ ಶೆಟ್ಟಿ, ಉಪ ಸಮಿತಿಯ ಸದಸ್ಯರು ಹಾಗೂ ಸಹಕರಿಸಿದ ಸರ್ವ ಸದಸ್ಯ ಬಾಂಧವರಿಗೆ ಹೃತ್ಪೂರ್ವಕ ವಂದನೆಗಳು.

ಕಾರ್ಯಕ್ರಮದ ಪ್ರಯುಕ್ತ ಯಕ್ಷಗಾನ ಕಾರ್ಯಕ್ರಮ ಆಯೋಜಿಸಿದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕ ಶ್ರೀ ಹರಿಪ್ರಸಾದ್ ಶೆಟ್ಟಿ ಮತ್ತು ಉಪ ಸಮಿತಿಯ ಸದಸ್ಯರಿಗೆ ಅಭಿನಂದನೆಗಳು.

ಮುಂದಿನ ಎರಡು ವರ್ಷಗಳ ಅವಧಿಗೆ ಸ್ನೇಹಚಿಂತನೆಯನ್ನು ಪ್ರಿಂಟಿಂಗ್ ಕ್ಷೇತ್ರದಲ್ಲಿ ಸುದೀರ್ಘ ಅನುಭವ ಹೊಂದಿರುವ ಪೂರ್ಣಿಮಾ ಪ್ರಿಂಟರ್ಸ್ ಇವರು ಮುದ್ರಣ ಮಾಡಲಿದ್ದಾರೆ. ಹಾಗೆಯೇ ಕಳೆದ ನಾಲ್ಕು ವರ್ಷಗಳಿಂದ ಸ್ನೇಹ ಚಿಂತನೆಯನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಸಾಯಿರಾಂ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ವಿಶ್ವನಾಥ್ ಶೆಟ್ಟಿ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ಸಮಿತಿಯ ಹೊಸ ಚಿಂತನೆ ಹಾಗೂ – ಕಾರ್ಯಯೋಜನೆಗಳನ್ನು ಸ್ನೇಹ ಚಿಂತನೆಯ ಮೂಲಕ ಸದಸ್ಯರಿಗೆ ತಲುಪಿಸುವ ಪ್ರಯತ್ನವನ್ನು ಮಾಡಲಿದ್ದೇವೆ. ಈ ಎಲ್ಲಾ ಯೋಜನೆಗಳಿಗೆ ತಮ್ಮ ಸಹಕಾರವನ್ನು ನಾವು ನಿರೀಕ್ಷಿಸುತ್ತಿದ್ದೇವೆ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**

ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು
# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ – ಗಣೇಶ ಚತುರ್ಥಿ ಆಚರಣೆ

ದಿನಾಂಕ 31.08.2022 ಬುಧವಾರದಿಂದ 02.09.2022 ಶುಕ್ರವಾರದವರೆಗೆ ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯು ಪ್ರತಿಷ್ಠಾಪನೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.



ಸಂಕೀರ್ಣದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ಆಯೋಜಿಸಿದ ಎಲ್ಲಾ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನೆರವೇರಿತು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆ ದಂಪತಿ, ಗೌರವ ಕಾರ್ಯದರ್ಶಿ ಶ್ರೀ ಬಿ. ಆನಂದರಾಮ ಶೆಟ್ಟಿ ದಂಪತಿ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ಕೀರ್ತನ್ ಶೆಟ್ಟಿ ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮೂರು ದಿನಗಳು ಹಲವಾರು ಕಾರ್ಯಕ್ರಮಗಳು ನಡೆಯಿತು.


ದಿನಾಂಕ 31.08.2022ರಂದು ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಗಣಪತಿ ಹೋಮ, 10.30ಕ್ಕೆ ಮಂದಿರದ ಮುಂಭಾಗದಲ್ಲಿ ಗಣೇಶ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ಕಲ್ಪೋಕ್ತ ಪೂಜೆ ಹಾಗೂ ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್‌ನ ಶ್ರೀ ಪದ್ಮನಾಭನ್ ಮತ್ತು ಶಿಷ್ಯಂದಿರು ಇವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಬೆಳಗಿನ ಉಪಹಾರದ ವ್ಯವಸ್ಥೆಯನ್ನು ಮಾಡಿದ ಮೂಡುಬಗೆ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ದಂಪತಿಗಳಿಗೆ, ಮಧ್ಯಾಹ್ನ ಭಕ್ತಾದಿಗಳಿಗೆ ಭೋಜನ ಪ್ರಸಾದವನ್ನು ಏರ್ಪಡಿಸಿದ್ದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ ದಂಪತಿಗಳಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಮಧ್ಯಾಹ್ನ 2.00 ಘಂಟೆಗೆ ನಡೆದ ಸಭಾ ಕಾರ್ಯಕ್ರಮದಲ್ಲಿ ದಾನಿಗಳನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದಿಸಲಾಯಿತು ಹಾಗೂ ಮುದ್ದು ಕಂದ ಫೋಟೋ ಸ್ಪರ್ಧೆಯ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ನಂತರ ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ ಚಂದ್ರಹಾಸ ಚರಿತೆ ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಯಕ್ಷಗಾನ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರವನ್ನು ನೀಡಿದ ಸಂಘದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ ಹಾಗೂ ಯಕ್ಷಗಾನ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.




ದಿನಾಂಕ 01.09.2022 ಗುರುವಾರ ವಿನಾಯಕನಿಗೆ ವಿಶೇಷ ಪೂಜೆ ಹಾಗೂ ಮಹಾಮಂಗಳಾರತಿ ನಡೆಯಿತು. ಸಂಜೆ ವಿಜಯನಗರ ಶ್ರೀ ರಾಮ ಭಜನಾ ಮಂಡಳಿಯವರ ಭಜನೆ ಕುಣಿತ ಕಾರ್ಯಕ್ರಮ ಜನ ಮೆಚ್ಚುಗೆಗೆ ಪಾತ್ರವಾಯಿತು. ಭಕ್ತಾದಿಗಳಿಗೆ ಪ್ರಸಾದವನ್ನು ನೀಡಿದ ಶ್ರೀ ಕಲಾವತಿ ಬಿ. ಶೆಟ್ಟಿಯವರಿಗೆ ಸಂಘದ ಪರವಾಗಿ ತುಂಬು ಹೃದಯದ ಅಭಿನಂದನೆಗಳು.

ದಿನಾಂಕ 02.09.2022 ಶುಕ್ರವಾರದಂದು ಬೆಳಿಗ್ಗೆ ಶ್ರೀ ದೇವರಿಗೆ ವಿಶೇಷ ಪೂಜೆ, ಮಧ್ಯಾಹ್ನ ಮಹಾಮಂಗಳಾರತಿ ನಡೆಯಿತು. ಸಂಜೆ 6.00ಕ್ಕೆ ಶ್ರೀ ದೇವರ ಮೂರ್ತಿಯನ್ನು ವಿಜೃಂಭಣೆಯಿಂದ ಬಂಟರ ಸಂಘದ ಆವರಣದಿಂದ ಹೊರಟು ವಿಜಯನಗರದ ಮತ್ತು ಚಂದ್ರಾ ಲೇಔಟ್ ಸುತ್ತಮುತ್ತ ಮೆರವಣಿಗೆಯ ಮೂಲಕ ಉಲ್ಲಾಳ ಕೆರೆಯ ಕಲ್ಯಾಣಿಯಲ್ಲಿ ವಿಸರ್ಜಿಸಲಾಯಿತು. ಬಿ.ಸಿ. ರೋಡ್ ತಂಡದವರ ಹುಲಿ ಕುಣಿತ ಮತ್ತು ಕೀಲುಗೊಂಬೆ ಕುಣಿತ ಕಾರ್ಯಕ್ರಮವು ಮೆರವಣಿಗೆಯ ವಿಶೇಷ ಆಕರ್ಷಣೆಯಾಗಿತ್ತು. ಹುಲಿ ಕುಣಿತಕ್ಕೆ ದೇಣಿಗೆ ನೀಡಿದ ಶ್ರೀ ರಾಜೇಶ್ ಶೆಟ್ಟಿ ದಂಪತಿಗಳಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಹುಲಿ ಕುಣಿತ ಮತ್ತು ಕೀಲುಗೊಂಬೆ ತಂಡದವರಿಗೆ ಊಟದ ವ್ಯವಸ್ಥೆಯನ್ನು ನೀಡಿದ ಶ್ರೀ ಸುಕುಮಾರ್ ಶೆಟ್ಟಿ, ನ್ಯೂ ಬ್ರಾಹ್ಮಿ ಉಪಹಾರ್ ಮತ್ತು ಶ್ರೀ ಯಶವಂತ್ ಶೆಟ್ಟಿ, ದೇವಿ ಉಪಹಾರ್ ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.



ಭಕ್ತಾಧಿಗಳಿಗೆ ರಾತ್ರಿಯ ಭೋಜನಾ ಪ್ರಸಾದವನ್ನು ಏರ್ಪಡಿಸಿದ್ದ ನಮ್ಮ ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ಆನಂದರಾಮ ಶೆಟ್ಟಿ ಬಿ. ಇವರಿಗೆ ಅಭಿನಂದನೆಗಳು.

ಹೋಟೆಲ್ ಉದ್ಯಮಿ ಶ್ರೀ ಸುಧಾಕರ ಶೆಟ್ಟಿ (ಕೂಲ್ ಕಾರ್ನರ್) ದೇವಸ್ಥಾನಕ್ಕೆ ಪ್ರತೀ ವರ್ಷವೂ ಹೂವಿನ ಅಲಂಕಾರ ಮಾಡಿ ಕೊಡುತ್ತಿದ್ದು ಈ ವರ್ಷವೂ ಅವರೇ ಅದರ ಸಂಪೂರ್ಣ ವೆಚ್ಚವನ್ನು ಭರಿಸಿದ್ದಾರೆ.

ಖ್ಯಾತ ಕೃಷಿ ಉದ್ಯಮಿ, ಕೊಡುಗೈ ದಾನಿಗಳಾದ ಶ್ರೀಮತಿ ಸುಜಯಾ ಹಾಗೂ ಶ್ರೀ ಇರ್ಮಾಡಿ ಜಯಪ್ರಸಾದ ಶೆಟ್ಟಿ ದಂಪತಿಗಳು ದೇವಸ್ಥಾನಕ್ಕೆ ವರ್ಷಂಪ್ರತಿಯಂತೆ ಅಂದವಾದ ಚಪ್ಪರವನ್ನು ಹಾಕಿಕೊಡುವುದರ ಜೊತೆಯಲ್ಲಿ ಧನ ಸಹಾಯವನ್ನು ಮಾಡಿದ್ದಾರೆ.

ಸಂಘದ ಮಾಜಿ ಪ್ರಥಮ ಉಪಾಧ್ಯಕ್ಷರಾದ ಶ್ರೀ ಕೊರ್ಗಿ ಭೋಜರಾಜ ಶೆಟ್ಟಿ ಇವರು ಲಡ್ಡು ಪ್ರಸಾದವನ್ನು ಒದಗಿಸಿಕೊಟ್ಟಿರುತ್ತಾರೆ. ವಿಸರ್ಜನಾ ಮೆರವಣಿಗೆಯ ಸಮಯದಲ್ಲಿ ಭಕ್ತಾದಿಗಳಿಗೆ ಪ್ರಸಾದವನ್ನು ನೀಡಿದ ಹಾಗೂ 108 ತೆಂಗಿನಕಾಯಿಗಳನ್ನು ನೀಡಿದ ಶ್ರೀ ಬಿ. ಸಂದೀಪ್ ಶೆಟ್ಟಿ ಇವರಿಗೂ ಸಂಘದ ಪರವಾಗಿ ಅಭಿನಂದನೆಗಳು.

ಶ್ರೀ ಗಣೇಶ ಮೂರ್ತಿಯನ್ನು ನೀಡಿದ ಶ್ರೀ ಸುಧಾಕರ ಶೆಟ್ಟಿ, ಜಡ್ಡಾಡಿ ದಂಪತಿಗಳಿಗೆ ಸಂಘದ ಪರವಾಗಿ ಅಭಿನಂದನೆಗಳು.

ಶ್ರೀ ವರಸಿದ್ಧಿ ಪ್ರಾರ್ಥನಾ ಮಂದಿರದ ಪೂಜೆಗೆ ವರ್ಷಕ್ಕೆ ಬೇಕಾಗುವ ದೀಪದ ಎಣ್ಣೆಯನ್ನು ನೀಡುತ್ತಿರುವ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಪೂಜಾ ಕಾರ್ಯದ ವೆಚ್ಚಕ್ಕೆ ದೇಣಿಗೆ ನೀಡುತ್ತಿರುವ ಸಂಘದ ಅಧ್ಯಕ್ಷರಾದ ಶ್ರೀ ಮುರಲೀಧರ ಹೆಗ್ಡೆ, ತೆಂಗಿನಕಾಯಿಗಳನ್ನು ದೇಣಿಗೆ ನೀಡುತ್ತಿರುವ ಶ್ರೀ ದೀಪಕ್ ಶೆಟ್ಟಿ ಮಾಜಿ ಖಜಾಂಚಿ, ಶ್ರೀ ಭಾಸ್ಕರ್ ಶೆಟ್ಟಿ, ಎಸ್.ಎಲ್.ವಿ ಕಾಂಡಿಮೆಂಟ್ಸ್ ಹಾಗೂ ಪ್ರತೀ ದಿನ ಹೂವಿನ ಸೇವೆ ಮತ್ತು ಪ್ರಾರ್ಥನಾ ಮಂದಿರದ ಸಮಾರಂಭಗಳಿಗೆ ವಿದ್ಯುತ್ ದೀಪಾಲಂಕಾರದ ವ್ಯವಸ್ಥೆಯನ್ನು ನೀಡುತ್ತಿರುವ ರಾಜ್ ಎಲೆಕ್ಟ್ರಿಕಲ್ಸ್‌ನ ಶ್ರೀ ಕೆ. ನಾಗರಾಜ್ ರೈ ಇವರೆಲ್ಲರಿಗೂ ಸಂಘದ ಪರವಾಗಿ ಅಭಿನಂದನೆಗಳು.

ಆಮಂತ್ರಣ ಪತ್ರಿಕೆ ಹಾಗೂ ಕರಪತ್ರಗಳ ಮುದ್ರಣವನ್ನು ಮಾಡಿಕೊಟ್ಟ ಕರಾವಳಿ ಪ್ರಿಂಟರ್ಸ್‌ನ ಶ್ರೀ ಶಾಂತರಾಮ ಶೆಟ್ಟಿಯವರಿಗೆ ಅಭಿನಂದನೆಗಳು.

ಈ ಎಲ್ಲಾ ಪೂಜಾ ಕಾರ್ಯಕ್ರಮಗಳಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಭಕ್ತಾದಿಗಳು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು.

## ಈ ಸಮಾರಂಭಕ್ಕೆ ಧನ ಸಹಾಯ ನೀಡಿದವರು :

ಶ್ರೀ ಮುರಲೀಧರ ಹೆಗ್ಡೆ
ಡಾ. ಜಗದೀಶ್ ವಿ. ಶೆಟ್ಟಿ
ಶ್ರೀ ಮಧುಕರ ಎಂ. ಶೆಟ್ಟಿ
ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ
ಶ್ರೀ ನವೀನ್ ಶೆಟ್ಟಿ
ಸಿಎ. ಕಿಶೋರ್ ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ
ಶ್ರೀ ಕಿರಣ್ ಕುಮಾರ್ ಶೆಟ್ಟಿ
ಶ್ರೀ ಸಂತೋಷ್ ಶೆಟ್ಟಿ ಮೈತ್ರಿ
ಶ್ರೀಮತಿ ಶೋಭಾ ಶೇಖ
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀ ಆನಂದರಾಮ ಶೆಟ್ಟಿ ಬಿ.
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀ ದೀಪಕ್ ಶೆಟ್ಟಿ
ಶ್ರೀ ಜಯರಾಮ್ ಶೆಟ್ಟಿ, ಹೊಳಿಗೆಮನೆ
ಶ್ರೀ ಸುದೀಪ್ ನಾಯಕ್
ಶ್ರೀಮತಿ ಮಾಲತಿ ಜೆ. ಶೆಟ್ಟಿ
ಶ್ರೀ ರಾಧಾಕೃಷ್ಣ ಶೆಟ್ಟಿ
ಶ್ರೀ ರತ್ನಾಕರ ಶೆಟ್ಟಿ
ಶ್ರೀಮತಿ ರತ್ನಾ ವಿಶ್ವಕರ್ಮ ಬಡಿಗಾರ್
ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ
ಶ್ರೀ ಅಮರನಾಥ ಶೆಟ್ಟಿ
ಶ್ರೀ ಆರ್. ಉಪೇಂದ್ರ ಶೆಟ್ಟಿ
ಶ್ರೀಮತಿ ಸುಜಾತ ಉದ್ಮ್ ಹೆಗ್ಡೆ
ಶ್ರೀ ಜಗನ್ನಾಥ ಶೆಟ್ಟಿ
ಶ್ರೀ ನಿರಂಜನ್ ಶೆಟ್ಟಿ
ಶ್ರೀ ರವೀಂದ್ರ ಶೆಟ್ಟಿ ಸಿದ್ದಾಪುರ
ಶ್ರೀ ಅರವಿಂದ ಶೆಟ್ಟಿ
ಸಿಎ. ವಿಜಯ್ ಶೆಟ್ಟಿ
ಶ್ರೀ ಶಂಕರ್ ಶೆಟ್ಟಿ
ಶ್ರೀ ರಮಿತ್ ಬಿ. ಶೆಟ್ಟಿ

ಈ ಎಲ್ಲಾ ಪೂಜಾ ಕಾರ್ಯಕ್ರಮಗಳಿಗೆ ಉದಾರ ದೇಣಿಗೆ ನೀಡಿ ಸಹಕರಿಸಿದ ದಾನಿಗಳನ್ನು ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ಶಾಲು ಹೊದಿಸಿ, ಪ್ರಸಾದ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದ ನಿರೂಪಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಶ್ರೀ ಅಜಿತ್ ಶೆಟ್ಟಿ ಉಳ್ತೂರು ಇವರಿಗೆ ಸಂಘದ ಪರವಾಗಿ ಧನ್ಯವಾದಗಳು.

ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.

**ಜಯಕರ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ಕೀರ್ತನ್ ಶೆಟ್ಟಿ**
ಚೇರ್‌ಮೆನ್, ಪ್ರಾರ್ಥನಾ ಮಂದಿರ ಸಮಿತಿ

## ರಾಣಿ ಅಬ್ಬಕ್ಕನಿಗೆ ಗೌರವ ಸಮರ್ಪಣೆ



ಪ್ರತೀ ವರ್ಷ ಆಗಸ್ಟ್ 15 ರಂದು ತುಳುಕೂಟ ಬೆಂಗಳೂರು, ಕರ್ನಾಟಕ ಸಾಬೂನು ಕಾರ್ಖಾನೆ ಹಾಗೂ ಬಂಟರ ಸಂಘ ಬೆಂಗಳೂರಿನ ಸಹಯೋಗದೊಂದಿಗೆ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಸ್ವಾತಂತ್ರ್ಯ ಹೋರಾಟಗಾರ್ತಿ ಉಳ್ಳಾಲದ ರಾಣಿ ಅಬ್ಬಕ್ಕ ಪ್ರತಿಮೆಗೆ ಮಾಲಾರ್ಪಣೆ ಹಾಗೂ 75ನೇ ವರ್ಷದ ಸ್ವಾತಂತ್ರ್ಯೋತ್ಸವದ ಸುವರ್ಣ ಸಂಭ್ರಮದ ಧ್ವಜಾರೋಹಣವನ್ನು ಶ್ರೀಮತಿ ಅನಿತಾ ಸುರೇಂದ್ರ ಹೆಗ್ಗಡೆ ಶ್ರೀ ಕ್ಷೇತ್ರ ಧರ್ಮಸ್ಥಳ ಇವರು ನೆರವೇರಿಸಿದರು. ಶ್ರೀಮತಿ ಅನಿತಾರವರು ಉಳ್ಳಾಲದ ರಾಣಿ ಅಬ್ಬಕ್ಕನ ವಂಶಸ್ಥರೂ ಹೌದು.

ಈ ಸಮಾರಂಭದಲ್ಲಿ ಸಾಬೂನು ಕಾರ್ಖಾನೆ ಆಡಳಿತ ಮಂಡಳಿ ನಿರ್ದೇಶಕ ಡಾ. ಮಹೇಶ, ನೆ.ಲ. ನರೇಂದ್ರ ಬಾಬು, ರಾಜೇಂದ್ರ ಕುಮಾರ ಕೆ.ವಿ, ಸುಂದರರಾಜ್ ರೈ, ಕಾರ್ಯದರ್ಶಿ, ಅಧ್ಯಕ್ಷ ಕೊಕ್ರಾಡಿ ದೇವೇಂದ್ರ ಹೆಗ್ಡೆ, ಅಜಿತ್ ಹೆಗ್ಡೆ ಮುಂತಾದ ಗಣ್ಯರು ಭಾಗವಹಿಸಿದ್ದರು.

ಬಂಟರ ಸಂಘದ ಪ್ರತಿನಿಧಿಗಳಾಗಿ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀಮತಿ ಜಯಶ್ರೀ ಸಿ. ರೈ ಮತ್ತು ಶ್ರೀಮತಿ ಶೋಭಾ ಶೇಖ ಇವರು ಪಾಲ್ಗೊಂಡಿದ್ದರು.

# ಬಂಟರ ಸಂಘ ಬೆಂಗಳೂರು

## ಮಹಿಳಾ ವಿಭಾಗ

# 'ದಸರಾ ಆಚರಣೆ'

**ದಿನಾಂಕ :** 01.10.2022, ಶನಿವಾರ, ಮಧ್ಯಾಹ್ನ 2.30 ರಿಂದ

## ಕಾರ್ಯಕ್ರಮ

- ದೇವಿ ಪೂಜೆ
- ಲಲಿತಾ ಸಹಸ್ರನಾಮ
- ಭಜನೆ
- ದಾಂಡಿಯಾ ನೃತ್ಯ
- ಪ್ರಸಾದ ವಿತರಣೆ
- ಲಘು ಉಪಹಾರ

ಸದಸ್ಯರೆಲ್ಲರೂ ತಮ್ಮ ಬಂಧು – ಬಾಂಧವರೊಡಗೂಡಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ವಿಜಯಲಕ್ಷ್ಮೀ ಎಸ್. ಶೆಟ್ಟಿ**
ಸಂಚಾಲಕಿ, ಮಹಿಳಾ ವಿಭಾಗ
ಮೊ : 94484 52719

**ಮಾಲತಿ ಜೆ. ಶೆಟ್ಟಿ**
ಚೇರ್‌ಪರ್ಸನ್, ಮಹಿಳಾ ವಿಭಾಗ
ಮೊ : 94817 76303

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಮಹಿಳಾ ವಿಭಾಗದ ಸದಸ್ಯರು**

# INDEPENDENCE DAY CELEBRATIONS




Bunts' Sangha RNS Vidyaniketan and Composite PU College witnessed an extravagant celebration of 'Azadi Ka Amrit Mahotsav' on 15th August, 2022 to commemorate the 75th year of Independence. The whole campus was beautifully decorated with tricolours which emanated a patriotic fervour.


The Chief Guest and other dignitaries were ushered by the Principal, Sri Yesudas, to the quadrangle. The Chief Guest for the day, Ms. Nivya P Shetty hoisted the Tricolour flag and gave it the honour and ceremonial salutation followed by the singing of the National Anthem.The event was presided by Sri M. Muralidhar Hegde, President of Bunts' Sangha Bengaluru. The programme was witnessed by Sri B. Anandram Shetty, Hon. Secretary and Convenor of Bunts' Sangha Bengaluru, Sri Amarnath Shetty, Treasurer of Bunts' Sangha Bengaluru, executive committee members, members of Bunts' Sangha and parents.

The Chief Guest inspected the Guard of Honour as the students of the school and college along with the Scouts and Guides troop marched to display their utmost vigour and discipline in sync to the beats of the drums.

The Independence Day celebrations proceeded with a galore of events enthusiastically putforth by the students of the Primary, the Upper Primary and the High School ICSE stream, The CBSE Stream and the Pre-University (PU) stream of the institution. The cultural celebration comprised of patriotic songs, musical drama and the Dance fiesta.

The day culminated by invoking in our hearts a deeper sense of devotion to our motherland and was embossed in all as a memorable day.

## *Congratulations!*



Mrs. Divya. K. Shetty has been selected as Deputy Superintendent of Police [Excise] by KPSC. She completed BE (Civil) from M S Ramaiah Engineering College. She is married to Rakshith S Kundapura, High Court Advocate and daughter of Mrs. Yashoda K. Shetty and Dr. P. K. Shetty, Former Professor and Dean, NIAS, Indian Institute of Science, Bengaluru. She is the daughter in law of Mrs. Rathna S. Shetty and Mr. J M Shekar Shetty of JMS Finance. Bunts' Sangha Bengaluru Congratulates and Wishes her all the very best.

# INDEPENDENCE DAY CELEBRATION AT R.N.S VIDYANIKETAN – II



**Freedom in the mind,**
**Faith in the words...**
**Pride in our soul...**

Bunts' Sangha RNS Vidyaniketan, Yalachaguppe marked the 75th Independence Day with much gaiety and alacrity. The school, decorated with tricolor - saffron, white and green balloons and flags, welcomed the eyes of all, to the function.

The ceremony started at 8:15 AM in the school open ground with a large crowd of staff, students and parents.

To commemorate the sovereignty of our Nation, the Chief Guests - Dr. Jagadish Shetty V (Vice President Bunts' Sangha Bengaluru) Geethanjali D. Ajila (Vice President, Bunts' Sangha Bengaluru) and Chikkahanumantharayappa (Ex Panchayath Member, Yalachaguppe) unfurled the tricolor flag and all in unison sang the National Anthem and expressed the joy of our freedom. Principal Dr. Anil kumar and Headmistress Kasturi Biradar were also present in this occasion.

The Ceremony was hosted by Arpitha Shetty (Department of Physics BSRNSV) and the Program began with a soul-stirring prayer to the accompaniment of lighting of the lamp, which was followed by a welcome address by the headmistress Kasturi Biradar. The Chief Guests, delivered speeches that gave an impetus to the event, emanated true connotation of patriotism after the flag hoisting ceremony and National Anthem.

Students of Preprimary, Primary and PU College gave various patriotic performances on this joyous occasion.

The program culminated with Vote of Thanks. At the end sweets were distributed to the students. Indeed, it was a day of joy, a day to love and respect our country and make it a better place for Indians to live and experience freedom, peace and Unity in Diversity.



ಪರಿಸರ ಸ್ನೇಹಿ ಗಣೇಶ ಮೂರ್ತಿ ತಯಾರಿಕೆಯ ಬಗ್ಗೆ ಮಕ್ಕಳಿಗೆ ತರಬೇತಿ

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ 25ನೇ ವಾರ್ಷಿಕ ಸರ್ವ ಸದಸ್ಯರ ಸಭೆ



28.08.2022ರ ಭಾನುವಾರ ಬೆಳಿಗ್ಗೆ 10:30 ಸಮಯಕ್ಕೆ ಬೆಂಗಳೂರು ಬಂಟರ ಸಂಘದ ಆವರಣದಲ್ಲಿ ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ 25ನೇ ವಾರ್ಷಿಕ ಮಹಾಸಭೆಯು ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಸದಸ್ಯರಾದ ಶ್ರೀ ಕೆ. ನಾಗೇಂದ್ರರವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಸಭೆಯಲ್ಲಿ ಮಹಿಳಾ ನಿರ್ದೇಶಕರಾದ ಶ್ರೀಮತಿ ಸರ್ವಾಣಿ ಜಿ. ರೈರವರು ದೈವಾಧೀನರಾದ ಸಹಕಾರಿಯ ಸದಸ್ಯರನ್ನು ಸ್ಮರಿಸಿ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿಕೊಟ್ಟರು.

ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್. ಶ್ರೀಧರ್ ಹೆಗ್ಡೆಯವರು ಸಹೃದಯಿ ಸಹಕಾರಿ ಬಂಧುಗಳನ್ನು ಸ್ವಾಗತಿಸುತ್ತಾ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಸಂಸ್ಥಾಪಕ ಅಧ್ಯಕ್ಷ ಡಾ॥ ಐ.ವಿ. ಶೆಟ್ಟಿಯವರು ಹುಟ್ಟು ಹಾಕಿದ ಸಹಕಾರಿಗೆ 25 ವರ್ಷ ತುಂಬುತ್ತಿರುವ ಈ ಶುಭಾವಸರದಲ್ಲಿ ನಡೆದು ಬಂದ ದಾರಿ ಪ್ರಗತಿಯನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿ ವೇದಿಕೆಯಲ್ಲಿ ಉಪಸ್ಥಿತರಿರುವ ಅಧ್ಯಕ್ಷರಾದ ಶ್ರೀ ಐ. ಜಯಪ್ರಸಾದ್ ಶೆಟ್ಟಿ, ಮಾಜಿ ಉಪಾಧ್ಯಕ್ಷರಾದ ಶ್ರೀ ಕೆ. ಭಗವಾನ್‌ದಾಸ್ ರೈ, ಕಾರ್ಯದರ್ಶಿ ಶ್ರೀ ಕೆ. ಆರ್. ಶೇಷಾದ್ರಿ ಹಾಗೂ ಹಾಜರಿರುವ ನಿರ್ದೇಶಕರೆಲ್ಲರನ್ನು ಮತ್ತು ಆಗಮಿಸಿದ ಸರ್ವ ಸದಸ್ಯರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕೆ. ಆರ್. ಶೇಷಾದ್ರಿಯವರು 2020–2021 ನೇ ಸಾಲಿನ ಸಭಾ ನಡವಳಿ ದೃಢೀಕರಣ, 2021–2022 ನೇ ಸಾಲಿನ ಆಡಳಿತ ಮಂಡಳಿಯ ವರದಿ, ಲೆಕ್ಕ ಪತ್ರಗಳು, ಲೆಕ್ಕ ಪರಿಶೋಧನಾ ವರದಿ, 2022–2023 ನೇ ಸಾಲಿನ ಮುಂಗಡ ಪತ್ರಗಳನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದರು. 2021–2022ನೇ ಸಾಲಿನ ಲಾಭಾಂಶದಲ್ಲಿ ಷೇರು ಬಂಡವಾಳದ ಮೇಲೆ 13% ಡಿವಿಡೆಂಡ್‌ನ್ನು ಅಧ್ಯಕ್ಷರು ಘೋಷಿಸಿದರು. ಸರ್ವ ಸದಸ್ಯರು ಆಡಳಿತ ಮಂಡಳಿಯ ಪ್ರಾಮಾಣಿಕ, ಪಾರದರ್ಶಕ, ಶಿಸ್ತುಬದ್ಧ ಆಡಳಿತ ಕಾರ್ಯ ವೈಖರಿಯನ್ನು ಪ್ರಶಂಶಿಸಿದರು.


ಕರ್ನಾಟಕ ಸರ್ಕಾರದ ಸಹಕಾರ ಸಂಘಗಳ ನಿಬಂಧಕರ ಸೂಚನೆ ಮೇರೆಗೆ ಉಪವಿಧಿಗಳ ಸಮಗ್ರ ತಿದ್ದುಪಡಿ ಪ್ರಕಾರ ಪ್ರಮುಖವಾಗಿ ಇನ್ನು ಮುಂದೆ ಸಹಕಾರಿ ಹೆಸರು **"ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಲಿಮಿಟೆಡ್"** ಎಂದು ಇರತಕ್ಕದ್ದು ಹಾಗೂ ನಿವ್ವಳ ಲಾಭದ ವಿನಿಯೋಗಗಳಲ್ಲಿನ ಕೆಲವು ಬದಲಾದ ತಿದ್ದುಪಡಿಯೊಂದಿಗೆ ಸರ್ವ ಸದಸ್ಯರ ಅನುಮೋದನೆ ಮೇರೆಗೆ ಉಪವಿಧಿಗಳ ತಿದ್ದುಪಡಿಯನ್ನು ಅಳವಡಿಸಲು ತೀರ್ಮಾನಿಸಲಾಯಿತು. ಸಹಕಾರಿಯ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದ ನಿರ್ದೇಶಕ ಮಂಡಳಿ ಹಾಗೂ ಸರ್ವ ಸದಸ್ಯರನ್ನು ಅಭಿನಂದಿಸುತ್ತಾ ಅಧ್ಯಕ್ಷರಾದ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿಯವರು ಚಿಕ್ಕದಾಗಿ ಚೊಕ್ಕದಾಗಿ ಅಧ್ಯಕ್ಷೀಯ ಭಾಷಣಗೈದರು. ಇದೇ 2022ರ ಡಿಸೆಂಬರ್ 24 ರಂದು ಸಂಜೆ ಬೆಂಗಳೂರು ಬಂಟರ ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಂಗಣದಲ್ಲಿ ವಿಜೃಂಭಣೆಯಿಂದ ಬೆಳ್ಳಿ ಹಬ್ಬ ಆಚರಿಸಲು ತೀರ್ಮಾನಿಸಿದ್ದು ಸವಿ ನೆನಪಿಗಾಗಿ ಶ್ರೀ ಗಿರೀಶ್ ರೈಯವರ ಸಂಪಾದಕೀಯದಲ್ಲಿ **"ರಜತೋತ್ಸವ ಸ್ಮರಣ ಸಂಚಿಕೆ"** ಹೊರತರಲು ನಿರ್ಧರಿಸಲಾಯಿತು. ಕೊನೆಯಲ್ಲಿ ನಿರ್ದೇಶಕರಾದ ಶ್ರೀ ಡಿ. ಚಂದ್ರಹಾಸ್ ರೈಯವರ ವಂದನಾರ್ಪಣೆಯೊಂದಿಗೆ ಮಹಾಸಭೆಯು ಸಂಪನ್ನಗೊಂಡಿತು.

## ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ



ಶ್ರೀ ಕೃಷ್ಣಜನ್ಮಾಷ್ಟಮಿಯು ದೇಶದಾದ್ಯಂತ ಸಂತಸದಿಂದ ಆಚರಿಸುವ ಶ್ರೇಷ್ಠ ಹಬ್ಬ ! ಶ್ರೀ ಕೃಷ್ಣನ ಈ ಜನ್ಮ ದಿನವನ್ನು ನಮ್ಮ BSRNSV-II ಪ್ರಿ ಪ್ರೈಮರಿ ವಿಭಾಗದ ಪುಟ್ಟ ಮಕ್ಕಳು ಎಲ್ಲರೂ ಶ್ರೀ ಕೃಷ್ಣ ಹಾಗೂ ರಾಧೆಯರಂತೆ ಸಿಂಗರಿಸಿಕೊಂಡು ಬಂದು 18.09.2022 ರಂದು ಆಚರಿಸಿದರು. ಮಕ್ಕಳ ಈ ಸಾಂಪ್ರದಾಯಿಕ – ಧಾರ್ಮಿಕ ವೇಷಭೂಷಣಗಳು ಆಚರಣೆಗೆ ಹೆಚ್ಚು ಮೆರಗು ನೀಡಿದವು. ನಮ್ಮ LKG ಮಕ್ಕಳು ಶ್ರೀ ಕೃಷ್ಣನ ಕೊಳಲ ಮಧುರ ನಾದದ ಗಾನಕ್ಕೆ ಎಲ್ಲರ ಮನಸೆಳೆವಂತೆ ನರ್ತಿಸಿದರು.

# Lesser Known Facts of Rituals



Dr. B. Rajeev Shetty

Though India was a knowledge hub in ancient days, much of the general population was illiterate or less educated. However, our ancestors were so knowledgeable that they used religious practices to teach/educate the general public. Hence, various rituals came into vogue.

The rituals are the tools used indirectly to educate people. One of such ritual meant especially for women who have not conceived for a long time is to go around the peepal tree which is also known as Ficus religiosa or sacred fig plant. The reason behind, is that this is the only plant emanating oxygen round the clock which helps in rejuvenating the individuals. In villages we have heard people telling us not to take shelter under a tamarind tree because of its least oxygen supply.

Another interesting fact is that Tulsi [Holy Basil Plant] which is also known as the Ocimum sanctum plant is grown near many homes. These plants have antiseptic property which can be used as a medicine for minor ailments. Apart from this, in the evening we light a lamp around tulsi. We light the lamp near the plant as a religious practice and also to shed darkness for those who are coming into the house in late hours, since there was no electricity in those days.

Another least known fact is that we put rangoli in front of many houses. The main reason is to watch for any creature entering the house which can be seen in the markings of Rangoli.

On many occasions we use plantain (Banana Plant) for decoration. Reason being, this plant manufactures and emanates oxygen for few hours for the crowded functions.

Another practice in traditional ancient India is tonsuring the scalp of children after death of parents; the probable reason being expression of sorrow. But I personally feel in those days deaths used to occur in remote areas especially in agricultural lands or forests where searching for dead bodies may take some time. By that time decay and bad smell would have occurred. By shaving the head we would avoid transferring the infection to healthy body.

These are some of the traditional practices, followed in the olden days, which have a scientific reasoning.

## ಅಭಿನಂದನೆಗಳು



ಡಾ। ಕೆ. ಸಿ. ಬಲ್ಲಾಳರು 1984ರಲ್ಲಿ ರಾಷ್ಟ್ರೀಯ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್‌ಗೆ ಸೇರಿ ಜಿಲ್ಲಾ ಕಾರ್ಯದರ್ಶಿ, ಅಧ್ಯಕ್ಷರಾಗಿ, ರಾಜ್ಯ (NIMA) ಅಧ್ಯಕ್ಷರಾಗಿ ಬೆಂಗಳೂರು ಶ್ರೀರಾಮಪುರದಲ್ಲಿ 5000 ಚದರ ಅಡಿಯ ಹಾಲ್, ಡಿಸ್ಪೆನ್ಸರಿ, ಹಲ್ಲಿನ ವಿಭಾಗ, ಅಟ್ಯಾಚ್‌ಡ್ ಟಾಯ್ಲೆಟ್ ಇರುವ 10 ರೂಮ್‌ಗಳು, ಕಣ್ಣಿನ ತಪಾಸಣೆಯ ಶಿಬಿರಗಳು ಹೀಗೆ ಅನೇಕ ಕೆಲಸಗಳನ್ನು ಮಾಡಿದ್ದಾರೆ. NIMA ಯ ರಾಷ್ಟ್ರೀಯ ಅಧ್ಯಕ್ಷರಾಗಿ ಕಳೆದ 75 ವರ್ಷಗಳಲ್ಲಿ ದಕ್ಷಿಣದ 5 ರಾಜ್ಯಗಳಲ್ಲಿ ಚುನಾಯಿತರಾದ ಏಕೈಕ ವ್ಯಕ್ತಿ ಇವರು. ಇದೇ ಸಮಯದಲ್ಲಿ ದೆಹಲಿಯಲ್ಲಿ NIMA ಭವನ ನಿರ್ಮಾಣವಾಯಿತು. ಇದೀಗ ಇವರಿಗೆ “NIMA ವೈದ್ಯರತ್ನ” ಗೌರವ ನೀಡಿ ಸನ್ಮಾನಿಸಲಾಯಿತು. ಬೆಂಗಳೂರು ಬಂಟರ ಸಂಘದ ಸರ್ವ ಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.

# ಯಕ್ಷ ಬಂಡಿಗೆ ಬಂಟರ ಕೊಂಡಿ

## ಯಕ್ಷಲೋಕ ಕಂಡ ಅಪ್ರತಿಮ ವಿದೂಪಕ ಬಂಟ ಕಲಾವಿದ ಹಳ್ಳಾಡಿ ಶ್ರೀ ಜಯರಾಮ ಶೆಟ್ಟಿ



ಹೆಚ್. ಶ್ರೀಧರ ಹೆಗ್ಡೆ

ನಗುವುದು ಸಹಜದ ಧರ್ಮ
ನಗಿಸುವುದು ಪರಧರ್ಮ ।
ನಗುವ ಕೇಳುತ ನಗುವುದತಿಶಯದ ಧರ್ಮ ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ।
ಮಿಗೆ ನೀನು ಬೇಡಿಕೊಳೊ–
ಮಂಕುತಿಮ್ಮ ॥

ನಕ್ಕರೆ ಹಾಲು ಸಕ್ಕರೆ, ಜೀವನದಲ್ಲಿ ಹಾಸ್ಯ ಪ್ರಜ್ಞೆ ಇರುವವರು ಸದಾ ಆರೋಗ್ಯದಿಂದ ಕಷ್ಟ ಕಾರ್ಪಣ್ಯಗಳನ್ನು ಸ್ವೀಕರಿಸಿ ಎದೆಗುಂದದೆ ಧೈರ್ಯದಿಂದ ಹಸನ್ಮುಖಿಗಳಾಗಿ ಸರಳವಾಗಿ ನಿಶ್ಚಿಂತೆಯಿಂದ ಪರಿಹಾರ ಹುಡುಕಿ ಮುನ್ನಡೆಯುತ್ತಾರೆ. ಸರ್ವೇ ಸಾಮಾನ್ಯವಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಹಾಸ್ಯ, ವಿನೋದ, ವಿಡಂಬನೆ, ತಮಾಷೆಗಳಿದ್ದು ಅದರದ್ದೇ ಆದ ಸ್ಥಾನಮಾನವಿರುತ್ತದೆ. ಆದರೆ ಹಾಸ್ಯಾಸ್ಪದವಾಗಬಾರದು. ನಾಟಕ, ಸಿನೆಮಾ, ಯಕ್ಷಗಾನಗಳಲ್ಲೂ ಹಾಸ್ಯಗಾರ / ವಿದೂಷಕರ ಪಾತ್ರ ಪ್ರಮುಖವಾದುದು. ಈ ನಿಟ್ಟಿನಲ್ಲಿ ಯಕ್ಷ ಬಂಡಿಗೆ ಬಂಟರ ಕೊಂಡಿ ಲೇಖನದಲ್ಲಿ ನಮ್ಮ ಹೆಮ್ಮೆಯ ಬಂಟ ವಿದೂಷಕರು ಬೆರಳೆಣಿಕೆಯಷ್ಟೇ ಎಂದರೆ ತಪ್ಪಾಗಲಾರದು. ಸುಮಾರು ಅರ್ಧ ಶತಮಾನಕ್ಕೂ ಮುಂಚೆ ಮಂದಾರ್ತಿ ಮೇಳದಲ್ಲಿ ಹಿರಿಯ ಹಾಸ್ಯ ಕಲಾವಿದ ಸುರಗಿಕಟ್ಟೆ ಹೆರಿಯ ಗಾಣಿಗರ ನಂತರ ನನ್ನ ತಂದೆ ಶ್ರೀ ರಾಮಣ್ಣ ಹೆಗ್ಡೆಯವರು ಹಾರಾಡಿ ರಾಮ ಗಾಣಿಗರ ಅವಧಿಯಲ್ಲಿ ಹಾಸ್ಯಗಾರ ಹಾಲಾಡಿ ಕೊರ್ಗು ಮತ್ತು ಉಡುಪಿ ಬಸವನವರ ಅವಧಿಯಲ್ಲಿ ಕುಂಜಾಲು ರಾಮಕೃಷ್ಣರವರನ್ನು ನೇಮಿಸಿದ ಕಾಲವದು. ಆಗ ಮಾರಣಕಟ್ಟೆ ಮೇಳದಲ್ಲಿ ವಿದೂಷಲರಾಗಿ ವಂಡ್ಸೆ ನಾಗಯ್ಯ ಶೆಟ್ಟರ ಕೊಡುಗೆ ಅಪಾರವಾದುದು. ತದನಂತರ ಮಡಾಮಕ್ಕಿ ಜಯರಾಮ ಶೆಟ್ಟಿಯವರು (ಕೊರ್ಗು ಶಿಷ್ಯ) ತನ್ನದೇ ಛಾಪನ್ನು ಮೂಡಿಸಿ ಜನಮನ ರಂಜಿಸುತ್ತಿದ್ದರು. ನಮ್ಮ ಯಕ್ಷಬಂಡಿಗೆ ಬಂಟರ ಕೊಂಡಿಯಾಗಿ 1967ರಿಂದ ಇಲ್ಲಿಯ ತನಕವೂ ಉತ್ತಮ ಮೇಲ್ಮಟ್ಟದ ಪ್ರಿಯವಾದ ಪಾತ್ರ ಘನತೆಯನ್ನು ಕಾಪಾಡಿಕೊಂಡು ಬಂದ ಖ್ಯಾತ ವಿದೂಷಕ ಯಕ್ಷ ಪಾತ್ರಧಾರಿ ನಮ್ಮ ನಿಮ್ಮೆಲ್ಲರ ಮನೆ ಮಾತಾಗಿರುವ ಚಿರಪರಿಚಿತ ಶ್ರೀ ಹಳ್ಳಾಡಿ ಜಯರಾಮ ಶೆಟ್ಟಿ, ಉಡುಪಿ ತಾಲೂಕಿನ ಶಿರಿಯಾರದ ಸಮೀಪದ ಹಳ್ಳಾಡಿ ಚಿಕ್ಕ ಗ್ರಾಮದ ಮೇರು ಕಲಾವಿದರಾಗಿ ಹಳ್ಳಾಡಿ ಮಂಜಯ್ಯ ಶೆಟ್ಟಿ, ಹಳ್ಳಾಡಿ ಕುಷ್ಠ ಹಾಗೂ ಹಳ್ಳಾಡಿ ಜಯರಾಮ ಶೆಟ್ಟರು ಯಕ್ಷ ಲೋಕದ ವಿಜಯ ಪತಾಕೆ ಬಾನೆತ್ತರಕ್ಕೆ ಹಾರಿಸಿದ್ದರು.



ಹಳ್ಳಾಡಿ ಜಯರಾಮ ಶೆಟ್ಟಿ

ಪ್ರಚಲಿತ ಯಕ್ಷಗಾನ ಕ್ಷೇತ್ರದಲ್ಲಿ ಹಾಸ್ಯ ಎಂದಾಗ ತಕ್ಷಣ ನೆನಪಿಗೆ ಬರುವ ಬಡಗು ತಿಟ್ಟಿನ ಹಿರಿಯ ವಿದೂಷಕ ಹಳ್ಳಾಡಿ ಜಯರಾಮ ಶೆಟ್ಟಿ. ಕುಂದಾಪುರ ತಾಲೂಕು ಹಳ್ಳಾಡಿ ಗ್ರಾಮದಲ್ಲಿ ಅಣ್ಣಪ್ಪ ಶೆಟ್ಟಿ ಮತ್ತು ಅಕ್ಕಮ್ಮ ಶೆಡ್ತಿ ದಂಪತಿಗಳ ಹೆಮ್ಮೆಯ ಸುಪುತ್ರನಾಗಿ 1956ರಲ್ಲಿ ಜನನ. ಪ್ರಸ್ತುತ ಕಕ್ಕುಂಜೆ ಗ್ರಾಮದಲ್ಲಿ ಮಡದಿ ರೇಣುಕಾ, ಕೀರ್ತಿಗೊಬ್ಬ ಕುವರ ರತೀಶ, ಆರತಿಗೊಬ್ಬ ಸುಪುತ್ರಿ ಸೌಮ್ಯ 5 ಮೊಮ್ಮಕ್ಕಳೊಂದಿಗಿನ ಸುಖ ಸಂಸಾರದಲ್ಲಿ ವಾಸ್ತವ್ಯ.

ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಸಂದರ್ಭದಲ್ಲಿ ಆ ಕಾಲದ ಹಳ್ಳಿಯ ಏಕಮೇವ ಮನರಂಜನೆಯಾದ ಯಕ್ಷಗಾನ ಮೇಳಗಳ ರಾತ್ರಿಯ ಆಟ ನೋಡಿ ಬಂದು ಹಗಲಲ್ಲಿ ದನ–ಕರುಗಳನ್ನು ಮೇಯಿಸುತ್ತಿರುವಾಗ ಗದ್ದೆಯಲ್ಲಿ ರಂಗಸ್ಥಳ ನಿರ್ಮಿಸಿ ಮುಖಕ್ಕೆ ಬೂದಿ, ಮಸಿ, ಕುಂಕುಮ ಬಳಿದುಕೊಂಡು ಕುಣಿದು ಕುಪ್ಪಳಿಸುತ್ತಿದ್ದ ಜಯರಾಮ ಶೆಟ್ಟರಿಗೆ ವಿದ್ಯೆಯನ್ನು ಮುಂದುವರಿಸುವುದಕ್ಕೆ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದರಿಂದ 4ನೇ ತರಗತಿಗೇ ಶಾಲೆಗೆ ವಿದಾಯ ಹೇಳಿ ಮೇಳಕ್ಕೆ ಹೋದರೆ ದಿನಂಪ್ರತಿ ವೇಷಧರಿಸಿ ಕುಣಿಯಬಹುದೆನ್ನುವ ಆ ಚಿಕ್ಕ ಪ್ರಾಯದ ಯೋಚನೆಯೇ ಇಂದು ಈ ಮಟ್ಟಕ್ಕೆ ತಲುಪಿಸಿತು. ಮೇಳದತ್ತ ಗಮನ ಹರಿಸಿದ ಈ ಬಾಲಕ ಗಂಜಿಗೂ ಗತಿಯಿಲ್ಲದ ತನಗೆ ಎರಡು

ಹೊತ್ತು ಊಟವಾದರೂ ಸಿಗುತ್ತದೆಂದು ಭಾವಿಸಿ ಸೀದಾ ಮಂದಾರ್ತಿ ಮೇಳಕ್ಕೆ ಸೇರ್ಪಡೆಗೊಂಡು ಕೋಡಂಗಿ, ಬಾಲಗೋಪಾಲ (ಕಟ್ಟು ವೇಷ) ಪಾತ್ರ ನಿರ್ವಹಿಸಿ ಅವರೇ ಎಣಿಸದಂತೆ ಕ್ರಮೇಣವಾಗಿ ಮಡಾಮಕ್ಕಿ ಜಯರಾಮ ಶೆಟ್ಟರು ವಿದೂಷಕರಾಗಿದ್ದವರ ಒಡನಾಟದಿಂದ ಅವರ ತೆರವಾದ ಸ್ಥಾನಕ್ಕೆ ಅಮಾವಾಸೆಬೈಲು ಅಣ್ಣಪ್ಪ ಹೆಬ್ಬಾರ್ ಮತ್ತು ಹಳ್ಳಾಡಿ ಮಂಜಯ್ಯ ಶೆಟ್ಟರ ಗುರುತ್ವ, ಮಾರ್ಗದರ್ಶನ, ತನ್ನ ವಿಶೇಷಾಸಕ್ತಿ, ಅಧ್ಯಯನ ಶೀಲತೆ, ಸ್ವಯಂ ಪ್ರತಿಭೆಗಳಿಂದ ಬಹುಬೇಗ ಪ್ರವರ್ಧಮಾನಕ್ಕೆ ಹಾಸ್ಯ ಭೂಮಿಕೆಯಲ್ಲಿ ತಮ್ಮ ಸ್ಥಾನವನ್ನು ಪ್ರತಿಷ್ಠಾಪಿಸಿದರು. ಪ್ರಪ್ರಥಮ ನಮ್ಮ ಮಂದಾರ್ತಿ ಮೇಳದಲ್ಲಿ ಗೆಜ್ಜೆ ಕಟ್ಟಿದ ಶೆಟ್ಟರು ಕಮಲಶಿಲೆ, ಪೆರ್ಡೂರು, ಅಮೃತೇಶ್ವರೀ, ಕುಂಬ್ಳೆ, ಮುಲ್ಕಿ ಹಾಗೂ ಸಾಲಿಗ್ರಾಮವೊಂದರಲ್ಲೇ 4 ದಶಕಗಳ ಅಧಿಕ ಕಲಾಸೇವೆ ಸಲ್ಲಿಸಿದ ಉಭಯ ತಿಟ್ಟುಗಳಲ್ಲಿ ಪ್ರಜ್ವಲಿಸಿದ ಜನಾಕರ್ಷಕ ಪ್ರೌಢ ಕಲಾವಿದರಾಗಿರುತ್ತಾರೆ. 19.05.2001 ರಲ್ಲಿ ಹೃದಯಾಘಾತದಿಂದ ಮಣಿಪಾಲ ಆಸ್ಪತ್ರೆಯಲ್ಲಿ ಅಡಚಣೆಯನ್ನು ಸರಿಪಡಿಸಲು ಹೃದಯ ಸಂಬಂಧಿ ರಕ್ತನಾಳದೊಳಗೆ ಸ್ಟಂಟ್ 3ನ್ನು ಇರಿಸಲಾಯಿತು.

ಇಂತಹ ಸನ್ನಿವೇಶದಲ್ಲೂ ತನ್ನ ನೋವುಗಳನ್ನು ಅಂತರಾಳದಲ್ಲಿ ಹುದುಗಿಸಿಟ್ಟುಕೊಂಡು, ಯಕ್ಷ ಪ್ರೇಕ್ಷಕರನ್ನು ಅಭಿಮಾನಿಗಳನ್ನು ನಕ್ಕು ನಗಿಸುವ ಹವ್ಯಾಸಕ್ಕೆ, ವೃತ್ತಿಗೆ ತಿಲಾಂಜಲಿಯನ್ನೀಯದೆ, ಕಾಲಮಿತಿ ಪ್ರದರ್ಶನ ನೀಡುವ ಹಟ್ಟಿಯಂಗಡಿ ಮೇಳದಲ್ಲಿ ಉತ್ಸುಕತೆಯಿಂದ ಸಕ್ರೀಯ ಪ್ರಧಾನ ಹಾಸ್ಯಗಾರನಾಗಿ, ತನ್ನ ಕರುಳಕುಡಿ ರತೀಶ್ ಸಹ ವಿದೂಷಕನಾಗಿ ಈರ್ವರ ಹಾಸ್ಯವನ್ನು ನೋಡುವ ಸೌಭಾಗ್ಯ ಕರುಣಿಸಿರುವುದು ಶ್ಲಾಘನೀಯ. ಚಂದಗೋಪ, ದಾರುಕ, ಮುದುಕಿ, ಬ್ರಾಹ್ಮಣ, ರಜಕ, ಕಂದರ, ದೂತ, ಶ್ವೇತಕುಮಾರ ಪ್ರೇತ, ಕಾಶಿಮಾಣಿ, ವಿಡೂರಥ, ಬಾಹುಕ, ಕೈರವ ಮೊದಲಾದ ಪೌರಾಣಿಕ ಪಾತ್ರಗಳು ಕಲಾಭಿಮಾನಿಗಳ ಮೈ ಮನಸ್ಸಿಗೆ ಕಚಗುಳಿಯಿಟ್ಟಿವೆ. ಪಾರಂಪರಿಕ ನಡೆಯ ಹಾಸ್ಯಗಾರಿಕೆ, ಸಮಯ ಸ್ಫೂರ್ತಿಯ ಸೃಜನಶೀಲತೆ, ಸಂದರ್ಭಕ್ಕೊಪ್ಪುವ ಪ್ರತಿ ಸ್ಪಂದನೆ, ಪ್ರಸಂಗಾನುಭವ ಪಾತ್ರಗಳಿಗೆ ಜೀವ ತುಂಬುವ ವೇಷ ಭೂಷಣ, ನೃತ್ಯ, ಹಾವ–ಭಾವಗಳೆಲ್ಲವೂ ಶೆಟ್ಟರನ್ನು ಸಕಲ ಕಲಾವಲ್ಲಭನಾಗಿ ಬಡಗಿನ ಅಗ್ರಶ್ರೇಯಾಂಕಿತ ಕಲಾವಿದರಾಗಿ ಜನಮಾನಸದಲ್ಲಿ ಇಂದಿಗೂ ಸಹ ಸುಭದ್ರ ನೆಲೆಯೊದಗಿಸಿವೆ.

ದೇಶ–ವಿದೇಶಗಳಲ್ಲೂ ತನ್ನ ಹಾಸ್ಯದಿಂದ ಛಾಪನ್ನು ಮೂಡಿಸಿರುವ ಈ ಮೇರು ಕಲಾವಿದನಿಗೆ ಉಡುಪಿ ಶ್ರೀ ಪೇಜಾವರ ಮಠದ ರಾಮ ವಿಠಲ ಪ್ರಶಸ್ತಿ, ರಾಜ್ಯ ಕಲಾದರ್ಶಿನಿ ಸಂಸ್ಥೆಯ ಕಾರಂತ ಪ್ರಶಸ್ತಿ, ಮೂಡಬಿದ್ರೆ ಸುಂದರ ಶೆಟ್ಟಿ ಪ್ರಶಸ್ತಿ, ಕರ್ನಾಟಕ ಯಕ್ಷಗಾನ ಅಕಾಡೆಮಿಯ ಯಕ್ಷಸಿರಿ ಪ್ರಶಸ್ತಿ, ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್‌ನ ಯಕ್ಷ ಪ್ರಶಸ್ತಿಯೇ ಮೊದಲಾದ ಪುರಸ್ಕಾರಗಳು ಇವರ ಮಡಿಲಿಗೇರಿವೆ.

ಹೃದಯಾಘಾತದ ನೋವಿನೊಂದಿಗೆ ಮಂಡಿನೋವು ದಿನೇದಿನೇ ಉಲ್ಬಣಿಸುತ್ತಿದ್ದು, ಏತನ್ಮಧ್ಯೆ ಮೇಳ ಬಿಟ್ಟು ನಿವೃತ್ತಿ ಹೊಂದಬಹುದಲ್ಲಾ ಎನ್ನುವವರೊಂದು ಕಡೆ, ಈ ಟೀಕೆ ಬರುವ ಮುನ್ನವೇ ಬಿಟ್ಟರೆ ಶೆಟ್ಟರು ಇನ್ನೂ ಚಲಾವಣೆಯಲ್ಲಿರಬೇಕಿತ್ತು ಎನ್ನುವ ಪ್ರೇಕ್ಷಕ ವರ್ಗ ಇನ್ನೊಂದೆಡೆ. ಈಗಿರುವ ಒಳ್ಳೆಯ ಹೆಸರನ್ನು ಉಳಿಸಿಕೊಂಡೇ ನಿವೃತ್ತರಾದರೆ ಅದೇ ಸ್ವರ್ಗಸುಖವೆನ್ನುತ್ತಾರೆ ಶ್ರೀಯುತ ಜಯರಾಮ ಶೆಟ್ಟರು.

ಕಷ್ಟ–ಸಂಕಷ್ಟ, ನೋವು – ಸಮಸ್ಯೆಗಳನ್ನು ಯಾರಲ್ಲೂ ತೋರಿಸಿಕೊಳ್ಳದೇ ತನ್ನ ಮನ – ಮನೆಯಲ್ಲಿಯೇ ಹುದುಗಿಟ್ಟುಕೊಂಡೇ ಇಂದಿಗೂ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುವ ಪ್ರಯತ್ನದೊಂದಿಗೆ ಪಾತ್ರಕ್ಕೆ ಧಕ್ಕೆ ಬಾರದೆ, ರಾತ್ರಿ ನಿದ್ದೆಗೆಟ್ಟು ಯೌವನವನ್ನು ಹಗಲಿಡೀ ಊರಿಂದೂರಿಗೆ ನಡೆದು ತಿರುಗಾಟ ಮಾಡಿ, ದೇಹವನ್ನು ದಣಿಸಿ ಆಯುಷ್ಯ ವ್ಯಯಿಸಿ, ಒಂದೇ ಬಗೆಯ ದಿನದ 2 ಹೊತ್ತಿನ ಊಟದೊಂದಿಗೆ "ಉದರ ನಿಮಿತ್ತಂ ಬಹುಕೃತ ವೇಷಂ" ಎಂಬಂತೆ, ಅಚ್ಚು ಕಟ್ಟಾಗಿ, ಕಟ್ಟು ನಿಟ್ಟಾಗಿ ಯಕ್ಷಗಾನದ ಸಾಂಪ್ರದಾಯಿಕ ಹಾಸ್ಯ ಪ್ರವೃತ್ತಿಯ ಮುಖ್ಯ ವಿದೂಷಕ ವೃತ್ತಿಯ ಮೇರು ಕಲಾವಿದರಾಗಿ ರಾರಾಜಿಸುತ್ತಿರುವ ಶ್ರೀಯುತರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಈ ಸಂದರ್ಭದಲ್ಲಿಯೇ ಘನ ರಾಜ್ಯ ಸರ್ಕಾರ ಗುರುತಿಸಿ, ಸನ್ಮಾನಿಸಬೇಕಾಗಿ ಆಶಿಸುತ್ತಾ, ಹಟ್ಟಿಯಂಗಡಿ ಗಣಪತಿ, ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರು ಈಡೇರಿಸಲೆಂದು ಪ್ರಾರ್ಥಿಸುತ್ತಾ ಶೆಟ್ಟರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಹಾರೈಕೆ.

# ಅಭಿನಂದನೆಗಳು



ಪ್ರತಿಷ್ಠಿತ ಲಿವಾ ಮಿಸ್ ದಿವಾ ಯುನಿವರ್ಸ್–2022 ಸೌಂದರ್ಯ ಸ್ಪರ್ಧೆಯ ಕಿರೀಟ ಮಂಗಳೂರು ಮೂಲದ ಯುವತಿ ದಿವಿತಾ ರೈ ಮುಡಿಗೇರಿಸಿಕೊಂಡಿದ್ದಾರೆ. ಮುಂಬೈನಲ್ಲಿ ನಡೆದ ಅದ್ದೂರಿ ವರ್ಣರಂಜಿತ ಸಮಾರಂಭದಲ್ಲಿ 2021ರ ಮಿಸ್ ಯುನಿವರ್ಸ್ ಹರ್ನಾಝ್ ಸಂದು ಅವರು ಲಿವಾ ಮಿಸ್ ದಿವಾ 2022 ಪ್ರಶಸ್ತಿ ಕಿರೀಟವನ್ನು ದಿವಿತಾ ರೈಗೆ ತೊಡಿಸಿದರು. 23 ವರ್ಷ ವಯಸ್ಸಿನ ದಿವಿತಾ ರೈ ಮಿಸ್ ಯುನಿವರ್ಸ್ 2022 ಸೌಂದರ್ಯ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ. ಇವರು ದಿಲಿಪ್ ರೈ ಮತ್ತು ಪ್ರವಿತ ರೈ ದಂಪತಿಗಳ ಪುತ್ರಿ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.



ಕೇರಳದ ಕೊಚಿನ್‌ನಲ್ಲಿ ನಡೆದ ಮಿಸ್ ಸೌತ್ ಇಂಡಿಯಾ ಅದ್ದೂರಿ ಕಾರ್ಯಕ್ರಮದಲ್ಲಿ, ಗ್ರ್ಯಾಂಡ್ ಫೈನಲ್‌ನಲ್ಲಿ ಎರಡನೇ ರನ್ನರ್ ಅಪ್ ಆಗಿ ಸಮೃದ್ಧಿ ವಿ. ಶೆಟ್ಟಿಯವರು ಆಯ್ಕೆಯಾಗಿದ್ದಾರೆ. ಬಳ್ಳಾರಿಯ ಹೋಟೆಲ್ ಉದ್ಯಮಿ ಶ್ರೀ ವಿಶ್ವನಾಥ ಶೆಟ್ಟಿ ಮತ್ತು ಶ್ರೀಮತಿ ಮಮತಾ ಶೆಟ್ಟಿಯವರ ಸುಪುತ್ರಿಯಾಗಿದ್ದು ಇದೇ ಮೊದಲ ಬಾರಿಗೆ ಹೈದರಾಬಾದ್–ಕರ್ನಾಟಕಕ್ಕೆ ದೊರಕಿರುವುದು ಸಂತಸದ ವಿಷಯವಾಗಿದೆ. ಇವರು ಮೂಲತಃ ಉಡುಪಿಯವರಾಗಿದ್ದು, ಹಲವಾರು ವರ್ಷಗಳಿಂದ ಬಳ್ಳಾರಿಯಲ್ಲಿ ಹೋಟೆಲ್ ಉದ್ಯಮಿಯಾಗಿದ್ದು ಬಳ್ಳಾರಿ ಜನತೆಗೆ ವಿಶ್ವನಾಥ ಶೆಟ್ಟಿಯವರು ಚಿರಪರಿಚಿತರು. ಸಮೃದ್ಧಿ ಶೆಟ್ಟಿ ಯವರು ಇಂಜಿನಿಯರಿಂಗ್ ಪದವೀಧರರಾಗಿದ್ದು ಬಹುರಾಷ್ಟ್ರೀಯ ಕಂಪೆನಿಯ ಉದ್ಯೋಗಿಯಾಗಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

## ಬಂಟರ ಸಂಘ ಬೆಂಗಳೂರು

### ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ–ವಿಧಾನ ನೆರವೇರಿಸಲು ಅಗತ್ಯ ಸಹಕಾರ/ ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ.

ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಮೊ : 9741220559 / 7022119739.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

# ಶ್ರದ್ಧಾಂಜಲಿ



**ಶ್ರೀ ವಿಜಯ ಮೋಹನ ರೈ ಇರ್ಮಾಡಿ**
ಸದಸ್ಯತ್ವ ಸಂಖ್ಯೆ : CL007105

ಪುತ್ತೂರು ಶ್ರೀ ವಿಜಯ ಮೋಹನ ರೈ ಇರ್ಮಾಡಿಯವರು ದಿನಾಂಕ 15.08.2022ರಂದು ತಮ್ಮ 63ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಸೌಕೂರು ಶೇರ್ವೆಗಾರಮನೆ ಶ್ರೀಮತಿ ಜ್ಯೋತಿ ರೈ, ಓರ್ವ ಪುತ್ರ, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಎಂ. ದಿನಕರ ಶೆಟ್ಟಿ ಕೆಂಜೂರು**
ಸದಸ್ಯತ್ವ ಸಂಖ್ಯೆ : CL000183

ದಿ. ಮಾರಾಳಿಮನೆ ಅನಂತ ಶೆಟ್ಟಿ ಹಾಗೂ ಕೆಂಜೂರು ನಾಯ್ಕರಮನೆ ದಿ. ದೊಡ್ಡಕ್ಕ ಅನಂತ ಶೆಟ್ಟಿ ಇವರ 4ನೇ ಪುತ್ರ ಕೆಂಜೂರು ಶ್ರೀ ಎಂ. ದಿನಕರ ಶೆಟ್ಟಿಯವರು ದಿನಾಂಕ 18.08.2022ರಂದು ತಮ್ಮ 65ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಶ್ರೀಮತಿ ಪರಿಣಿತ ಶೆಟ್ಟಿ (ಸುಪ್ರಿಂ ಕೋರ್ಟ್‌ನ ನಿವೃತ್ತ ಜಡ್ಜ್ ದಿ. ಜಗನ್ನಾಥ್ ಶೆಟ್ಟಿಯವರ ಪುತ್ರಿ), ಓರ್ವ ಪುತ್ರಿ, ನಾಲ್ವರು ಸಹೋದರರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀಮತಿ ಶಾಂತ ಡಿ. ಶೆಟ್ಟಿ**
ಸದಸ್ಯತ್ವ ಸಂಖ್ಯೆ : CL007153

ಕಡಂದಲೆ ಶ್ರೀಮತಿ ಶಾಂತ ಡಿ. ಶೆಟ್ಟಿಯವರು ದಿನಾಂಕ 24.08.2022ರಂದು ತಮ್ಮ 86ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಕಾಪು ಶ್ರೀ ದಿವಾಕರ ಶೆಟ್ಟಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ನಾಲ್ವರು ಮೊಮ್ಮಕ್ಕಳು, ಇಬ್ಬರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಸದಾನಂದ ಶೆಟ್ಟಿ ಕೆ.**
ಸದಸ್ಯತ್ವ ಸಂಖ್ಯೆ : CL000811

ವಿಜಯಾ ಬ್ಯಾಂಕ್‌ನ (ಈಗಿನ ಬ್ಯಾಂಕ್ ಆಫ್ ಬರೋಡಾ) ಮಾಜಿ ಚೇರ್‌ಮೆನ್, ಸೋಹಂ ಗ್ರೂಪ್ ಆಫ್ ಕಂಪೆನೀಸ್‌ನ ಸ್ಥಾಪಕ ಅಧ್ಯಕ್ಷರು ಮತ್ತು ಏರ್ ಇಂಡಿಯಾ ಹಾಗೂ ಇಂಡಸ್ಟ್ರಿಯಲ್ ರಿ ಕನ್‌ಸ್ಟ್ರಕ್ಷನ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದೇಶಕರು ಹಾಗೂ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲಾಡಳಿತ ಮಂಡಳಿಯ ಮಾಜಿ ಸದಸ್ಯರು, ಕೊಡಿಯಾಲಬೈಲ್ ಶ್ರೀ ಸದಾನಂದ ಶೆಟ್ಟಿ. ಇವರು ದಿನಾಂಕ 24.08.2022ರಂದು ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಮಿತ್ತೋಡಿ ಶ್ರೀಮತಿ ಸುಜಾತ ಎಸ್. ಶೆಟ್ಟಿ, ಇಬ್ಬರು ಪುತ್ರರು, ಓರ್ವ ಮೊಮ್ಮಗ, ಇಬ್ಬರು ಸಹೋದರರು, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಭಾಸ್ಕರ ಶೆಟ್ಟಿ ಹೆಚ್.**
ಸದಸ್ಯತ್ವ ಸಂಖ್ಯೆ : CL004017

ಕುಂದಾಪುರ ಹೊಸಮಠ ಶ್ರೀ ಭಾಸ್ಕರ ಶೆಟ್ಟಿ ಇವರು ದಿನಾಂಕ 30.08.2022ರಂದು ತಮ್ಮ 58ನೇ ವಯಸ್ಸಿನಲ್ಲಿ ನಿಧನರಾದರು. ಇವರು ಓರ್ವ ಪುತ್ರ, ಮೂವರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

# ನವಭಾವ, ನವ ಶಕ್ತಿ ತುಂಬಿದ ಶತಮಾನದ ಕವಿ ಕಯ್ಯಾರ



ಭುವನ ಪ್ರಸಾದ ಹೆಗ್ಡೆ

"ಐಕ್ಯವೊಂದೇ ಮಂತ್ರ, ಐಕ್ಯದಿಂದೆ ಸ್ವತಂತ್ರ,

ಐಕ್ಯಗಾನದಿ ರಾಷ್ಟ್ರ ತೇಲುತಿರಲಿ!

ಭಾರತದಿ ಮಮ ಜನ್ಮ,ಸ್ವಾತಂತ್ರ್ಯವೇ ಧರ್ಮ

ಒಕ್ಕೊರಲಿನುದ್ಘೋಷ ಕೇಳುತಿರಲಿ".

ಎಂದು ಸ್ವಾತಂತ್ರ್ಯ ಹೋರಾಟಗಾರರಿಗೆ ನವಭಾವ, ನವಜೀವ, ನವಶಕ್ತಿ ತುಂಬಿದ ಕಯ್ಯಾರರು ಮುಂದೆ ಗಾಂಧೀಜಿಯವರ ಆಶಯದಂತೆ ಭೂಗತರಾಗಿದ್ದುಕೊಂಡು ಹಲವಾರು ದೇಶಭಕ್ತಿಯ ಗೀತೆಗಳನ್ನು ರಚಿಸಿದರು.

ಮಂಗಳೂರಿನ ಶಾರದಾ ಪ್ರೆಸ್ ಪ್ರಕಟಿತ 'ಸ್ವದೇಶಭಿಮಾನಿ' ಮತ್ತು ಕುಡ್ಪಿ ವಾಸುದೇವ ಶೆಣೈ ಅವರ 'ಪ್ರಭಾತ' ಪತ್ರಿಕೆಗಳಲ್ಲಿ ಕಯ್ಯಾರರು ಉಪ ಸಂಪಾದಕರಾಗಿದ್ದರು. ಇದು ಕವಿಗಳ ಪ್ರಕಟತೆಗೆ ಅನುಕೂಲವಾಗಿತ್ತು. ನಡಿ, ತಾಯಿನಾಡು, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ದೇಶಬಂಧು ಪತ್ರಿಕೆಗಳಲ್ಲಿಯೂ ಅವರ ದೇಶ ಭಕ್ತಿಯ ಲೇಖನಗಳು, ಕವಿತೆಗಳು 'ದುರ್ಗಾದಾಸ'ನೆಂಬ ಕಾವ್ಯನಾಮದಲ್ಲಿ ಪ್ರಕಟವಾಗುತ್ತಿದ್ದುವು. ಪಾಂಡೇಶ್ವರ ಕಾಳಿಂಗರಾಯರು ಕಯ್ಯಾರರ ಹಾಡುಗಳನ್ನು ನಾಡಿನ ಉದ್ದಗಲಕ್ಕೂ ಹಾಡಿ ಜನ ಜಾಗೃತಿಯನ್ನು ಮೂಡಿಸಿದರು. ನಂತರದ ಕಾಲದಲ್ಲಿ ಉಳ್ಳಾಲದ ಶಾಸಕ ಬಿ. ಎಂ. ಇದಿನಬ್ಬರು ಮೇಲಿನ ಪದ್ಯವನ್ನು ವಿಧಾನಸಭೆ ಸಹಿತ ಮೂರು ಸಾವಿರಕ್ಕೂ ಅಧಿಕ ಬಾರಿ ಹಾಡಿದ್ದಾರೆ.

ಬಹಳ ಜನಪ್ರಿಯವಾಗಿದ್ದ 'ಶ್ರೀಮುಖ' ಎಂಬ ಕಯ್ಯಾರರ ಪದ್ಯ ರಾಷ್ಟ್ರಪ್ರೇಮಕ್ಕೊಂದು ಅತ್ಯುತ್ತಮ ಉದಾಹರಣೆ.

"ಆರ್ಯರೋ, ಮೊಗಲರೋ, ಕ್ರೈಸ್ತರೋ ತಡೆಯೇನು?

ಎಲ್ಲರೂ ಬರಲೆಂದು ಸ್ವಾಗತಿಸಿದೆ, ಜಾತಿಮತ ಬೇರೆನದೆ

ಬಣ್ಣನುಡಿ ಬದಲೆನದೆ ಭೇದವೆಣಿಸದೆ ತಾಯೆ ನೀ ಸಲಹಿದೆ

ಶುಭದಿನದ ಹೊಂಬೆಳಕಿನಾನಂದ ಶೋಭೆಯಲಿ

ನಿನ್ನ ಶೀಮುಖವೊಮ್ಮೆ ನೋಡಬೇಕು"

ಎನ್ನುವ ಕಯ್ಯಾರರ ಪದ್ಯದಲ್ಲಿ ಸ್ವಾತಂತ್ರ್ಯದ ಶುಭದಿನವನ್ನು ನೋಡುವ ನಿರಂತರ ಆಶಾಭಾವ ವ್ಯಕ್ತವಾಗುತ್ತದೆ.



ಅಸಹಕಾರ ಚಳುವಳಿಯನ್ನು ಸಂಘಟಿಸುವುದಕ್ಕಾಗಿ ಎರಡನೇ ಬಾರಿಗೆ ಗಾಂಧೀಜಿಯವರು ಬರುವ ಸುದ್ದಿ ತಿಳಿದು, ಕಯ್ಯಾರರು ತಮ್ಮ ಮಿತ್ರರೊಂದಿಗೆ ಸುಮಾರು ಮೂವತ್ತೈದು ಮೈಲು ದೂರದ ಮಂಗಳೂರನ್ನು ನಡೆದುಕೊಂಡೇ ತಲುಪುತ್ತಾರೆ. ಈ ಸಂದರ್ಭವನ್ನು ಕಯ್ಯಾರರು ವಿವರಿಸುತ್ತಾರೆ, "ತೀರ್ಥಯಾತ್ರೆಗೆ ಹೋಗುವಂತೆ ಹೊರಟೆವು. ಕಾಲ್ನಡಿಗೆಯ ಆಯಾಸ ಒಂದಿಷ್ಟೂ ತೋರಲಿಲ್ಲ. ಮಂಗಳೂರಿನ ಕೊಡಿಯಾಲಬೈಲಿನ ಡಿಪ್ರೆಸ್ಡ್ ಕ್ಲಾಸ್ ಮಿಶನಿನ ಕಟ್ಟಡದ ದ್ವಾರದಲ್ಲಿ ಗಾಂಧೀಜಿಯವರನ್ನು ಕಂಡೆನು. ಅಂಗಿ ಹಾಕಿರಲಿಲ್ಲ. ಸಮಸ್ತ ಭಾರತದ ಆರಾಧ್ಯ ದೇವರಂತಿದ್ದ ಮಹಾತ್ಮರು ಸೌಜನ್ಯಶಾಲಿಯೆಂಬಂತೆ ತೋರಿತು." ಅದೇ ಭಾವದಲ್ಲಿ ಗಾಂಧೀ ದರ್ಶನ ಎಂಬ ಕವಿತೆ ಮೂಡಿಬಂತು.

"ಶಾಂತ ಸಾಮ್ರಾಜ್ಯದ ಮಹಾಂತ ಸಾಮ್ರಾಟನನ್ನು ಕಂಡನಣ್ಣ

ಹರ್ಷಗೊಂಡಿಹನ್ನ" ಎಂದು ತಮ್ಮ ಧನ್ಯತಾಭಾವವನ್ನು ಪ್ರಕಟಿಸಿದ್ದಾರೆ.

'ದುಡಿತವೇ ನನ್ನ ದೇವರು' ಎನ್ನುವ ಆತ್ಮ ಕಥನದಲ್ಲಿ, ಕಯ್ಯಾರರು, ಸ್ವಾತಂತ್ರ್ಯ ಹೋರಾಟದ ಕಾಯಕದಲ್ಲಿ ತೊಡಗಿದ್ದ ತಮ್ಮ ಅವಿಶ್ರಾಂತ ದುಡಿಮೆಯನ್ನು ಎಳೆಎಳೆಯಾಗಿ ಬಿಚ್ಚಿಡುತ್ತಾರೆ. "ಪತ್ರಿಕೋದ್ಯೋಗಿಯೂ, ರಾಷ್ಟ್ರೀಯ ಕಾರ್ಯಕರ್ತನೂ ಆಗಿದ್ದುದರಿಂದ ಧುರೀಣರು ನನ್ನನ್ನು ಭೂಗತ ಚಟುವಟಿಕೆಗಳಿಗೆ ನಿಯೋಜಿಸಿದರು. ಬಾಲ್ಯದಾರಭ್ಯ ಕೆಲಸವನ್ನು ಹಠ ಹಿಡಿದು ಸಾಧಿಸುವ ಪ್ರವೃತ್ತಿ ಬಂದಿತ್ತು. ಸ್ವಾತಂತ್ರ್ಯ ಸಂಪಾದನೆಗೆ ಹಗಲಿರುಳು ಅಂತರಂಗವಾಗಿ, ಶಾರೀರಿಕವಾಗಿ, ಬೌದ್ಧಿಕವಾಗಿ, ಅನ್ನಾಹಾರವಿಲ್ಲದೆ, ನಿದ್ದೆ ಮಾಡದೆ ಅವಿಶ್ರಾಂತ ದುಡಿಮೆ ನನಗೆ ಹಿತವಾದುದರಿಂದ ಹಾಗೆಯೇ ಪ್ರವೃತ್ತನಾದೆ. ಗುಪ್ತ ಚಟುವಟಿಕೆಗಳ ಸಾಹಿತ್ಯ ಸಂದೇಶಗಳನ್ನು ಕಾರ್ಯಕರ್ತರಿಗೆ ತಲುಪಿಸುವುದಕ್ಕಾಗಿ ರಾತ್ರೋರಾತ್ರಿ ಐವತ್ತು ಮೈಲು ದೂರ ನಡೆದುಕೊಂಡೇ ಹೋಗುತ್ತಿದ್ದೆ. ಯಾವುದೋ ಅಗೋಚರ ಶಕ್ತಿ ನನ್ನ ತಾಯಿಯ ಹಾಗೂ ತಾಯ್ನಾಡಿನ

ಆಶೀರ್ವಾದದ ಶ್ರೀರಕ್ಷೆ ನನ್ನನ್ನು ಕಾಪಾಡುತ್ತ ಬಂತು ಎಂದು ನಾನು ಇಂದಿಗೂ ಧನ್ಯತೆ ಅನುಭವಿಸುತ್ತೇನೆ." ಈ ಮಾತುಗಳಲ್ಲಿ ಕಯ್ಯಾರರು ಸ್ವಾತಂತ್ರ್ಯ ಹೋರಾಟದ ಕಾವನ್ನು ನಿರಂತರವಾಗಿ ಉಳಿಸಿಕೊಳ್ಳುವುದಕ್ಕಾಗಿ ತಮ್ಮ ಜೀವವನ್ನೇ ಪಣವಾಗಿಸಿಕೊಂಡು ತೊಡಗಿದ ಕಾಯಕ ಮನದಟ್ಟಾಗುತ್ತದೆ.

ಹಲವು ವರ್ಷಗಳ ಹೋರಾಟದ ನಂತರ ಸ್ವಾತಂತ್ರ್ಯ ಲಭಿಸಿದಾಗ ಕವಿಯ ಹಿಗ್ಗು ಅವರ್ಣನೀಯ.

"ದಾಸ್ಯ ದಾರಿದ್ರ್ಯಗಳ, ಹಾಸ್ಯ ದೌರ್ಬಲ್ಯಗಳ ಮುರಿವ
ಭರವಸೆಯ ಬಿಡುಗಡೆಯು ಬಂತು !

ಸ್ವಾತಂತ್ರ್ಯ ಪಡೆದಿಹೆವು, ತಲೆಯೆತ್ತಿ ನಡೆಯುವೆವು,
ವಜ್ರದೇಹಿಗಳಾವು; ಬನ್ನಿರೆಲ್ಲ.

ಭಾರತದ ಬಿಡುಗಡೆಗೆ ಹೋರಾಡಿರುವ ನಮಗೆ ಯಾರ
ಭಯ ? ನಾವಿಂದು ಮುಂದಾಗಿರೆ

ಹದಿನಾಲ್ಕು ಲೋಕವನು ಸಪ್ತಸಾಗರವನು ಗೆದ್ದು
ದಾಂಟುವ ಶಕ್ತಿ ವೇಗವುಂಟು"

ಎಂದು ಆತ್ಮ ವಿಶ್ವಾಸದಿಂದ ಉದ್ಗರಿಸುತ್ತಾರೆ.

ಸ್ವಾತಂತ್ರ್ಯ ದೊರೆತಾಗ ಕಯ್ಯಾರರು ಮೂವತ್ನಾಲ್ಕರ ತರುಣ. ಸಂತೋಷದಿಂದ ಮೈ ಮರೆಯದೆ ವಿನೀತರಾಗಿ ತನ್ನ ಕರ್ತವ್ಯ ಪ್ರಜ್ಞೆಯನ್ನು ಮೆರೆಯುತ್ತಾರೆ.

"ಸ್ವಾತಂತ್ರ್ಯ ಸ್ವರ್ಗ ಸೋಪಾನ ಸಾವಿರವೇರಿ,
ಸೌಖ್ಯನಂದನ ವಿಹಾರದೊಳಿಷ್ಟವಿಲ್ಲ,

ತಾಯ್ನೆಲದ ಗದ್ದೆ ಕೆಸರಿನ ತೀರ್ಥದೊಳೆ ಮಿಂದು ಪುಣ್ಯ
ಪುಳಕಿತನಪ್ಪೆ, ನಷ್ಟವಿಲ್ಲ"

ರಾಜಘಾಟಿನ ಗಾಂಧೀ ಸಮಾಧಿಯ 'ಹೇ–ರಾಮ' ಎಂಬ ಶಬ್ದಗಳು ಕವಿಯ ಅಂತಃಕರಣವನ್ನು ಕಲುಕಿದುವು.

"ಹೊಡೆದೆವೋ ಹೊಡೆತದಲಿ ನೋಯದನ,
ಕೊಲಬಾರದೆಂದವನ,

ಸುಟ್ಟೇವೋ ಬೆಂಕಿಯಲಿ ಸುಡದವನ, ಮರೆತೆವೋ ನಾವ್
ಮರೆಯಬಾರದನ

ಕಳೆದೆವಯ್ಯೋ ಕಳಕೊಳ್ಳಬಾರದನ, ಹೇ ರಾಮ ನಾವೆಂಥ
ಪಾಪಿಜನ

ಹೇ ರಾಮ, ನಮಗಾಗಿಯೇ ಸತ್ತೆ, ಹೇ ರಾಮ
ನಿನಗಾಗಿಯೇ ಅತ್ತೆ."

ಈ ಕವಿತೆ ಎಲ್ಲರ ಹೃದಯವನ್ನು ಆರ್ದ್ರವನ್ನಾಗಿಸುತ್ತದೆ.

"ಕನ್ನಡಾಂತರ್ಗತಂ ತುಳುನಾಡು ನನ್ನದಿದು,
ಭಾರತಾಂತರ್ಗತಂ ಕನ್ನಡದ ಬದುಕು"

ಎಂದು ತಮ್ಮ ತುಳುನಾಡನ್ನು ಭಾರತದ ಆಂತರ್ಯಕ್ಕೆ ಜೋಡಿಸಿ ರಾಷ್ಟ್ರೀಯತೆಯನ್ನು ಮೆರೆದಿದ್ದಾರೆ.

ಸಾಹಿತ್ಯದಲ್ಲಿ ಮಾತ್ರವಲ್ಲದೆ ವೈಯಕ್ತಿಕ ಬದುಕಿನಲ್ಲೂ ಕಯ್ಯಾರರು ರಾಷ್ಟ್ರೀಯತೆಯನ್ನು ವ್ರತದಂತೆ ಪಾಲಿಸಿದರು. ಜೀವನದುದ್ದಕ್ಕೂ ಖಾದಿಧಾರಿಯಾಗಿದ್ದರು. ಪೇಟೆಯ ವೃತ್ತಿ ತೊರೆದು ಗ್ರಾಮೋದ್ಧಾರದ ಆಶಯದಿಂದ ಹಳ್ಳಿಯಲ್ಲಿ ನೆಲೆಸಿದರು. ಸಂಸ್ಕೃತ ಕನ್ನಡಗಳಲ್ಲಿ ಸ್ನಾತಕೋತ್ತರ ಪದವಿ ಪಡೆದು, ನಲವತ್ತೊಂದು ಕೃತಿಗಳನ್ನು ರಚಿಸಿ ಡಾಕ್ಟರೇಟ್, ನಾಡೋಜ ಪದವಿಗಳಿಗೆ ಭಾಜನರಾಗಿ, ಸಾಹಿತ್ಯ ಕ್ಷೇತ್ರದ ಅತ್ಯುಚ್ಚ ಗೌರವವಾದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಮೂವತ್ತಮೂರು ವರ್ಷಗಳ ಅಧ್ಯಾಪನದ ಅವಧಿಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ನೂರು ಶೇಕಡಾ ವಿದ್ಯಾರ್ಥಿಗಳು ತೇರ್ಗಡೆಯಾಗಿ ತನಗೆ ಶಿಕ್ಷಕರ ರಾಷ್ಟ್ರ ಪ್ರಶಸ್ತಿ ಕೊಡಿಸಿದರೆಂದು ಅಭಿಮಾನ ಪಡುತ್ತಿದ್ದರು. ಹದಿನೈದು ವರ್ಷ ಬದಿಯಡ್ಕ ಪಂಚಾಯತ್ ಅಧ್ಯಕ್ಷರಾಗಿ ಗಾಂಧೀಜಿಯವರ ಗ್ರಾಮೋದ್ಧಾರದ ಕನಸನ್ನು ನನಸಾಗಿಸಿದರು. ಉದಯಗಿರಿ ವಿದ್ಯಾಗಿರಿಗಳಲ್ಲಿ ಎರಡು ಶಾಲೆಗಳನ್ನು ತೆರೆದರು. ಕೇರಳ ಸರ್ಕಾರದಿಂದ ಆದರ್ಶ ಕೃಷಿಕ ಪ್ರಶಸ್ತಿ ಪುರಸ್ಕೃತರಾದರು. ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಡೆಸಿ, ರಾಜ್ಯದಲ್ಲಿಯೇ 'ಅತ್ಯುತ್ತಮ ಪಂಚಾಯತ್' ಪ್ರಶಸ್ತಿ ಪಡೆದರು.

ಕಂಚಿನ ಕಂಠ, ನಿತ್ಯ ನೂತನ ಮಾತಿನ ಓಟ, ಸಮಯ ಪರಿಪಾಲನೆ, ಪ್ರತಿಯೊಂದು ಪತ್ರಕ್ಕೂ ಅಂದೇ ಉತ್ತರಿಸುವ ಬದ್ಧತೆ, ಪಾಲಿಸಿಕೊಂಡು ಬಂದ ಶಿಸ್ತುಗಳಿಂದಾಗಿ ಸುಮಾರು ಮೂವತ್ತು ವರ್ಷಗಳ ಕಾಲ ಕಾಸರಗೋಡು ಮತ್ತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳ ಸಾಹಿತ್ಯಿಕ ಸಮಾರಂಭಗಳಿಗೆ ಕಯ್ಯಾರರು ಅನಿವಾರ್ಯ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಕವಿತೆ, ಪದ್ಯ, ವ್ಯಕ್ತಿ ಚಿತ್ರಣ, ಅನುವಾದ, ಸಾಹಿತ್ಯ ವಿಮರ್ಶೆ, ವಿದ್ಯಾರ್ಥಿಗಳ ಪಾಠಮಾಲೆ, ನಾಟಕ, ಆತ್ಮಕಥನ ಸಹಿತ ಅವರ ಎಲ್ಲಾ ಕೃತಿಗಳಲ್ಲಿ ಸಾಮಾಜಿಕ ಕಳಕಳಿ, ರಾಷ್ಟ್ರಪ್ರೇಮ, ಬದ್ಧತೆ, ಜನಜಾಗೃತಿ, ಮಣ್ಣಿನ ಕಂಪು ಸಮ್ಮಿಳಿತವಾಗಿ ಓದುಗರಿಗೆ ರಸಾನುಭವವನ್ನು ನೀಡುತ್ತದೆ.

ತೊಂಬತ್ತೈದನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಕಯ್ಯಾರರ ಜೀವಮಾನ ಸಾಧನೆಗಳನ್ನು ಮತ್ತು ಕೃತಿಗಳ ಶೀರ್ಷಿಕೆಗಳನ್ನು ಪೋಣಿಸಿಕೊಂಡು ಹಿರಿಯ ಕವಿ ಅಂಬಾತನಯ ಮುದ್ರಾಡಿಯವರು ರಚಿಸಿದ ಕವಿತೆ ಮನಮುಟ್ಟುತ್ತದೆ.

"ಕನ್ನಡದ ಕಾವ್ಯ ಕನ್ಯಯಳ ಕಣ್ಣಾಗಿಪಿನಲಿ,
ಕಯ್ಯಾರ ಕಿಞ್ಞಣ್ಣ ರೈ ಯವರು ನೋಡೆ
ಕವಿತಾ ಕುಟೀರದಲಿ ಹೊಂಗನಸು ಕಾಣುತಲಿ
ಕನ್ನಡದ ಹಿರಿಮೆಯನು ದನಿಯೆತ್ತಿ ಹಾಡೆ

'ಶ್ರೀಮುಖ'ದಿ ಹೊಮ್ಮಿಹ ಐಕ್ಯಗಾನದ ಮಂತ್ರ
'ಚೇತನ' 'ಪುನರ್ನವಂ' ಕೊರಗದಿಹ 'ಕೊರಗ'
ಪರ್ವ 'ಪಂಚಮಿ' ಯಲ್ಲಿ ಮಂಗಲಂ ಸರ್ವತ್ರ
ಲೋಕ ಕಲ್ಯಾಣಕ್ಕೆ ಬಗೆತೆರೆದ ರಾಗ

ಕನ್ನಡದ ನುಡಿಯೋಜ, ಕಬ್ಬಿಗರ ಕುಲದೋಜ,
ನಾಡೋಜಗಿವಗಿಲ್ಲ ಜಾತಿ ಮತ ಬೇಧ
'ಬೆಂಕಿಬಿದ್ದಿದೆ ಮನೆಗೆ' ಯೆಂದು ನುಡಿದನು ಸಾಜ
ಕನ್ನಡದ ಗುಡಿಕಾಯುವಲ್ಲೀತ ಯೋಧ

ಓ ಕವಿಯೆ ಕರುನಾಡ 'ಪ್ರತಿಭಾಪಯಸ್ವಿನಿ'ಯೇ
ಬಾಗುತಿಹೆನಿದೊ ತಲೆಯ, ನಿಮ್ಮ ಪದತಲಕೆ
'ಗಂಧವತಿ' ಪೃಥ್ವಿಯಿಂದೊಗೆದ ಕವಿ 'ಚೇತನ'ವೆ
ಕಂಡ ಕನಸುಗಳೆಲ್ಲ ನನಸಕ್ಕೆ ನೆಲಕೆ.

ತೊಂಬತ್ತ ಐದಕ್ಕೆ ತುಂಬಯ್ಯ ಇನ್ನಾರು
ನೀನಲ್ಲ ದಿನ್ನಾರು ತುಂಬುವರು ಶಂಭು
ಕಯ್ಯಾರ ಕಂನಾಡ ಜನಕೆ ಬೆಳಕಾಗಿಹರು
ಜೀವೇಮ ಶರದ ಶತಮ್ ಭಾಗ್ಯ ತುಂಬು"

ಕಯ್ಯಾರರು ನೂರ ಒಂದು ವರ್ಷಗಳ ಆರೋಗ್ಯ ಪೂರ್ಣ ಜೀವನ ನಡೆಸಿದರು. ಜೀವಿತ ಕಾಲದಲ್ಲಿ ಬೆರಗು ಹುಟ್ಟಿಸುವ ಆಸಾಮಾನ್ಯ ಸಾಧನೆಗಳನ್ನು ದಾಖಲಿಸಿ, ಜೀವಂತ ದಂತಕಥೆಯಾಗಿ 2015ರ ಆಗಸ್ಟ್ 9ರಂದು ಕಾವ್ಯಲೀನರಾದರು.

## Bunts' Sangha RNS Vidyaniketan

## CISCE YOGA CHAMPIONSHIP 2022-23



CISCE National sports and games 2022-23 organized yoga championship which was hosted by Sacred Heart's Girls High School on 28th & 29th July 2022. The event was very well organized by the host school; more than 25 schools were participated from all over Karnataka in the event for different categories. Our RNS Vidyaniketan school had also participated and bagged several prizes :

1. U14 Girls group – Gold Medal
2. U19 Girls group – Gold Medal
3. U19 Boys group – Gold Medal
4. U17 Boy – Silver Medal
5. U19 Boy – Rhythmic Silver Medal
6. U19 Girl – Rhythmic Gold Medal

Ananya V Shetty has bagged best Yoga performer under the girls category .

Srujan T has bagged best Yoga performer under the Boys category .

*Congratulations!*

***Academic Excellence***



**Kumari Athmi Rai**
D/o. Jayaram Rai & Prathibha Rai
**12th STD CBSE (Sc.)- 96.8%**
Sri Chaitanya Techno School, J. P. Nagar



**Kumari Manya S. Shetty**
D/o. Sadashiva B. & Pushpa S.
**10th STD CBSE - 94%**
Kendriya Vidyalaya, Malleshwaram

# KRISHNA JANMASHTAMI CELEBRATION



Bunts' Sangha R.N.S. Vidyaniketan, Vijayanagar, Bengaluru celebrated Krishna Janmashtami on 24/08/2022 in a special assembly. The Pre-primary wing students looked bright and colourful, dressed up as Krishna and Radha, complete with flutes, peacock feathers and mutkas (earthen pot).

The Montessori block was decorated with a beautiful image of Gopalkrishna with many cows and beautiful flowers. The students were overjoyed to see the Dahi Handi (pot of butter and curd). A puja was performed by the school heads, teachers and students. Fragrance of flowers, soothing aroma of burning incense and camphor, along with jingle of the bells filled the air. Prasad was distributed to the students after the puja. An enthralling dance, group song, relevant speech and shloka signifying Janmashtami marked the celebration of the religious festival.

# ಅಭಿನಂದನೆಗಳು



**ಶ್ರೀಮತಿ ಕಸ್ತೂರಿ ಶೆಟ್ಟಿ ಹೆಚ್. ಎಸ್.**

ಶ್ರೀಮತಿ ಕಸ್ತೂರಿ ಶೆಟ್ಟಿ ಹೆಚ್.ಎಸ್. ರವರು ಕರ್ನಾಟಕ ವಿಧಾನಸಭೆಯ ಸಚಿವಾಲಯದ ಉಪಕಾರ್ಯದರ್ಶಿ ಹುದ್ದೆಗೆ ಪದೋನ್ನತಿ ಪಡೆದಿರುತ್ತಾರೆ. ಇವರು ಶೃಂಗೇರಿ ಕೆ.ಎಸ್. ಲೋಕೇಶ್ ಶೆಟ್ಟಿಯವರ ಧರ್ಮಪತ್ನಿ ಹಾಗೂ ದಿವಂಗತ ಹೆಗ್ಗುಂಜೆ ನಡುಬೆಟ್ಟು ಶ್ರೀ ಸೀತಾರಾಮ ಶೆಟ್ಟಿ ಮತ್ತು ಬನ್ನಾಡಿ ದಿವಂಗತ ಶ್ರೀಮತಿ ಪ್ರೇಮಾ ಎಸ್. ಶೆಟ್ಟಿಯವರ ಪುತ್ರಿಯಾಗಿರುತ್ತಾರೆ. ಇವರು ಮುಂದೆಯೂ ತಮ್ಮ ಸೇವಾ ಅವಧಿಯಲ್ಲಿ ಉನ್ನತ ಹುದ್ದೆಯನ್ನು ಹೊಂದಲಿ ಎಂದು ಆಶಿಸುವ,

**ಬನ್ನಾಡಿ ನಾಯರ್‌ಬೆಟ್ಟು ಕುಟುಂಬಸ್ಥರು**
ಮುರಲೀಧರ ಭಂಡಾರಿ, ಕುಬೆವೂರು ದೊಡ್ಡಮನೆ, ಮುಲ್ಕಿ

**ಹೆಗ್ಗುಂಜೆ ನಡುಬೆಟ್ಟು ಕುಟುಂಬಸ್ಥರು**
ಹೆಚ್. ಶಂಕರ ಶೆಟ್ಟಿ, ವಕೀಲರು, ಬೆಂಗಳೂರು

ADVT.

# ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಸದಾನಂದ ಶೆಟ್ಟಿ ಕೆ.**

**ನಿಧನ : 24.08.2022**

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಆಡಳಿತ ಮಂಡಳಿಯ ಮಾಜಿ ಸದಸ್ಯರು, ವಿಜಯಾ ಬ್ಯಾಂಕ್‌ನ (ಬ್ಯಾಂಕ್ ಆಫ್ ಬರೋಡಾ) ಮಾಜಿ ಚೇರ್‌ಮೆನ್ ಮತ್ತು ಸೋಹಂ ಗ್ರೂಪ್ ಆಫ್ ಕಂಪೆನೀಸ್‌ನ ಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ. ಸದಾನಂದ ಶೆಟ್ಟಿಯವರು ದೈವಾಧೀನರಾಗಿರುವುದು ನಮಗೆಲ್ಲರಿಗೂ ಅತ್ಯಂತ ದುಃಖವಾಗಿದೆ.

ತಮ್ಮ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ತಮ್ಮ ಕುಟುಂಬದವರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇವೆ.

ಆನಂದರಾಮ ಶೆಟ್ಟಿ ಬಿ.
ಗೌರವ ಕಾರ್ಯದರ್ಶಿ

ಎಂ. ಮುರಳೀಧರ ಹೆಗ್ಡೆ
ಅಧ್ಯಕ್ಷರು

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು
ಹಾಗೂ ಸರ್ವ ಸದಸ್ಯರು ಬಂಟರ ಸಂಘ ಬೆಂಗಳೂರು

## 7NT/8DAYS PACKAGE TOUR TO

# GUJARAT WITH STATUE OF UNITY


## FROM 27TH OCTOBER TO 3RD NOVEMBER 2022



**HIGHLIGHTS :** You Will Visit : Gandhi Ashram, Iskon Temple, Akshardham Temple, Bet Dwaraka, Nageshwar Jyotirling, Somnath Temple with Light and Music Show, Nishkalank Mahadev Temple, Baroda Palace, STATUE OF UNITY with VIP Entry Pass, Sardar Sarovar Dam, Valley of Flower & Laser Show

**INCLUSIONS:** Accommodation For 1nt At Ahemadabad, 2nt At Dwaraka, 1nt At Somanth, 1nt At Bhavnagar, 2nt At Vadodara In 4* Category of Hotels, All Sight Seeing by Super Deluxe Ac Coach, with Experienced Local Guide. Breakfast, Lunch & Dinner Included, To & Fro Trainfare in Shatabdi Express.




**PACKAGE COST INR 46900/- PER PERSON - ALL INCLUSIVE - EX-MUMBAI**

For any further details please contact:

IATA Approved

Canara Tours & Travels Pvt. Ltd

....... GOOD PEOPLE TO TRAVEL WITH

**Mr. S. B. Shetty – 9820510043**
101, Udyog Kshetra, L.B.S. Marg, Off Link Road, Mulund (W), Mumbai-80. I Tel.: 41115000

**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**

**E-mail : fionna@canaratravels.com • Website : www.canaratravels.com**

**Mr. Varun Mallya - 9480744833**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06

**Mr. Prabhat Shetty - 9481950340**

**Mr. Suresh Ajila 09448089189** (Bangalore)

ADVT.

ಸ್ಥಾಪನೆ : 1997

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

# Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040. ದೂರವಾಣಿ: 23393444 ಮೊಬೈಲ್ : 8722006082
E-mail: vijaya_souharda@yahoo.in, vijayasouharda@rediffmail.com

## ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. 25ರ ರಜತ ಸಂಭ್ರಮಕ್ಕೆ ಕಾಲಿಡುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

### ಸಾಲಗಳು

- ಜಾಮೀನು ಸಾಲ : ರೂ. 50,000/–
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು – 13%**

**2016–17 ರಿಂದ ಕ್ರಮವಾಗಿ 15% ವಾರ್ಷಿಕ ಡಿವಿಡೆಂಡ್ ವಿತರಣೆ**
**ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ**

### ವ್ಯವಹಾರದ ವೇಳೆ

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

ನಿರ್ದೇಶಕರುಗಳು :

ಶ್ರೀ ಕೆ. ಭಗವಾನ್ ದಾಸ್ ರೈ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಸ್ಥಾಪಕ ಅಧ್ಯಕ್ಷರು : ದಿ|| ಡಾ|| ಐ.ವಿ. ಶೆಟ್ಟಿ – 1997
ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಉಪಾಧ್ಯಕ್ಷರು

ADVT.

# ಅಭಿನಂದನೆಗಳು



2018ರಲ್ಲಿ ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾಗಿ ಆಯ್ಕೆಗೊಂಡು ತನ್ನ ಕ್ರಿಯಾಶೀಲ ಚಿಂತನೆಗಳೊಂದಿಗೆ, ಹಲವಾರು ಯೋಚನೆಗಳನ್ನು ಯೋಜನೆಗಳನ್ನಾಗಿ ಪರಿವರ್ತಿಸಿ, ವಿಶೇಷವಾಗಿ ಯಲಚಗುಪ್ಪೆಯಲ್ಲಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II, ವಿಜಯನಗರದಲ್ಲಿ ಪುರುಷರ ವಸತಿಗೃಹ ಹಾಗೂ ನಿರಂತರವಾಗಿ ಸಮುದಾಯಮುಖಿ ಚಟುವಟಿಕೆಗಳು ನಡೆದು ಬಂಟರ ಸಂಘ ಬೆಂಗಳೂರಿನ ಹಿರಿಮೆಯನ್ನು ಹೆಚ್ಚಿಸಿದೆ. ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಬೆಂಬಲದೊಂದಿಗೆ ಸಂಘವನ್ನು ಸಮರ್ಥವಾಗಿ ಮುನ್ನಡೆಸಿದ **ಶ್ರೀ ಆರ್. ಉಪೇಂದ್ರ ಶೆಟ್ಟಿ** ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

**ಶ್ರೀಮತಿ ಸುಜಯ ಜೆ. ಶೆಟ್ಟಿ ಮತ್ತು ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**

ನಂ. 13/14, ಪ್ರಸಾದ್ ರೆಸಿಡೆನ್ಸಿ, ಐ.ಟಿ ಲೇಔಟ್,

ವಿಜಯನಗರ, ಬೆಂಗಳೂರು – 560040.

ADVT.

REGISTERED KA/BGW-1589/2021-2023 RNI NO : KARBIL/2005/16402, Date of Publication 07-09-2022.
Licenced post without prepayment License No. PMG BG /WPP-219/2021-2023, Total No. of Pages 24+4=28
Licensed to post at Bengaluru PSO, Mysore Road, Bengaluru - 560026, on 10th or 12th of every Month




Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere,
Bengaluru - 560 058. Phone : 080 - 23359588 | 23351210.